


ಅಪರಂಜಿ

ತಿಳಿನಗೆಯ ಕಾರಂಜಿ

□ ಆನಂದ್ □ ಚಂದ್ರು □ ಜಿ.ಎನ್.ಜಿ.

□ ನಳಿನೀ ಪ್ರಿಯ □ ಕೇಫ □ ಅ.ರಾ.ಸೆ.

□ ಅಶೋಕ್ □ ಲೀಲಾ ಮಿರ್ಲೆ □ ಕಿಟ್ಟು

□ ಸೂರಿ □ ಕಪಟ ಕವಿ

ಸಂಪುಟ
ಸಂಚಿಕೆ-
ನವೆಂಬರ್–198

ಬಿಡಿಪ್ರತಿ :

ಕೇವಲ ಒಂದೂವರೆ ರೂಪಾಯಿ



(ತಿಳಿನಗೆಯ ಕಾರಂಜಿ)

ಸಂಪುಟ ೪ ಸಂಚಿಕೆ ೨

ನವೆಂಬರ್ 1986

ಬಿಡಿ ಪ್ರತಿ :—ಕೇವಲ ಒಂದೂವರೆ ರೂಪಾಯಿ

ವಾರ್ಷಿಕ ಚಂದಾ ರೂ. 15/-

ಆಜೀವ ಚಂದಾ : ರೂ. 150/-

ಗೌರವ ಸಲಹೆಗಾರರು :
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು–560 003

ಈ ಸಂಚಿಕೆಯಲ್ಲಿ.....................

ಲೇಖನ	ಲೇಖಕ/ಲೇಖಕಿ	ಪುಟ
ಅಪರಂಜಿ ಕಿಡಿ	ಆನಂದ್	4
ನಿಮ್ಮ ಬುಧ್ಧಿಗೊಂದು ಸವಾಲು	ಚಂದ್ರು	6
ತೋಳ–ಕುರಿಮರಿ ಕತೆ	ಜಿ.ಎನ್.ಜಿ.	7
ಬೆಂಗಳೂರು ಇಂದು–೮	ನಳಿನೀ ಪ್ರಿಯ	9
ಯಾತ್ರಿಕರ ಪತ್ರ	ಕೇಫ	13
ಕಣ್ಣೀರಿಲ್ಲದೆ ವಾಕ್ಯರಣ	ಅ.ರಾ.ಸೆ	18
ಗುಪ್ತ ಸಮಾಲೋಚನೆ	ಅಶೋಕ್	22
ಪ್ರಾಣಿ ಪ್ರಿಯರು	ಲೀಲಾ ಮಿರ್ಲೆ	24
ಪ್ರಸವ ವೇದನೆ	ಕಿಟ್ಟು	28
ಗಣೇಶನ ಹಬ್ಬ	ಸೂರಿ	32
ಒಡೆಯನ ಕನಸು	ಕಪಟ ಕವಿ	36

ವ್ಯಂಗ್ಯ ಚಿತ್ರಗಳು   ಚಂದ್ರು, ಅಶ್ವಥ್

ಮುದ್ರಣ   ಇಂಪ್ರೆಶರ್ಸ್, ಮಲ್ಲೇಶ್ವರಂ ದೂರವಾಣಿ 362989, 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೪ ನವೆಂಬರ್-೯೮ ಸಂಚಿಕೆ-೨

ಬ್ರಹ್ಮಪುರದಲ್ಲಿ ಚಿಕ್ಕದಾದ ಹೃದಯ ಕಮಲವೆಂಬ ಮನೆಯಿದೆ. ಅಲ್ಲಿ ದಹ ರಾಕಾಶವಿದೆ (ಚಿಕ್ಕ ಆಕಾಶ). ಅದರಲ್ಲಿರುವುದನ್ನೇ ಹುಡುಕಿ ಅರಿಯಲು ಯತ್ನಿಸ ಬೇಕು.

-ಛಾಂದೋಗ್ಯ

ದಹರಾಕಾಶವೆಂದರೆ ಬ್ರಹ್ಮ. ಉಪಾಸನೆಗಾಗಿ ಈ ಉಪದೇಶವನ್ನು ಮಾಡಿದೆ. ಇದಕ್ಕೆ ದಹರವಿದ್ಯೆ ಎಂಬ ಹೆಸರಿದೆ.

ದಹರಾಕಾಶವೆಂದರೆ ಬ್ರಹ್ಮವಲ್ಲವೆಂಬ ಒಂದು ಸಣ್ಣವಾದವಿದೆ.

ಈಗ ಇಲ್ಲಿ ನಡೆದಿರುವುದಾದರೂ ಏನು ? ಅಭಿವೃದ್ಧಿಶೀಲದೇಶವೆಂದರೆ ಹಿಂದುಳಿದ ದೇಶವೆಂದು ಅರ್ಥ ತಾನೇ? ಒಂದು ಸೇಫ್ಟಿಪಿನ್ ಅಥವಾ ಬ್ಲೇಡ್‌ನ ಗುಣಮಟ್ಟ ಎಷ್ಟಿದೆಯೆಂದು ಪ್ರದರ್ಶನ ಮಾಡಿ ಮುಖದ ನೀರು ಇಳಿಸುವಷ್ಟು ಮಟ್ಟಿಗೆ ನಮ್ಮ ತಂತ್ರಜ್ಞಾನ ಮುಂದುವರಿದಿದೆ. ನಿಮಗೆ ಅದೋ ಆ ತಿರುವಿನಲ್ಲಿ ಕಾಣುತ್ತಿರುವುದು ಇಪ್ಪತ್ತೊಂದನೆಯ ಶತಮಾನ. ಕಾಲ ಹಿಂದಕ್ಕೆ ಹೋಗುವುದಿಲ್ಲ ಎಂದು ನೀವೂ ಬಲ್ಲಿರಿ.

ಆದರೆ ಹಿಂದುಳಿಯಲು ನಮ್ಮಲ್ಲಿ ಚಿಕ್ಕ ಘನಘೋರ ರೇಸ್ ಆರಂಭವಾಗಿದೆ ಬಲ್ಲಿರಿತಾನೇ! ಈ ಪಟುಗಳನ್ನೇ ಕಳಿಸಿದ್ದರೆ, ಏಷ್ಯಾಡ್‌ನಲ್ಲಿ ಸ್ವರ್ಣಗೆದ್ದವರೆಲ್ಲಾ ಹಿಂದುಳಿದವರು ಎಂದು ಪರಿಗಣಿಸುತ್ತೇವೆ ಎಂದಿದ್ದರೆ, ಎಲ್ಲ ಸ್ವರ್ಣಗಳೂ ನಮ್ಮ ಪಾಲೇ ಆಗುತ್ತಿದ್ದವೋ ಏನೋ?

ಏಷಿಯಾಡಿನ ವ್ಯವಸ್ಥಾಪಕರಾದರೂ ದೂರದೃಷ್ಟಿ ಇಟ್ಟುಕೊಂಡು, ಸ್ಪರ್ಧೆ ಯಲ್ಲಿ ಹಿಂದುಳಿದವರಿಗೇ ಪದಕಗಳ ಸಿಂಹಪಾಲನ್ನು ಮೀಸಲಿಡಬಹುದಾಗಿತ್ತು. ಆದರೆ ನಾಗತ್ತೆಗೆ ಮೀಸೆಯೂ ಬರಲಿಲ್ಲ, ಅವಳನ್ನು ಚಿಕ್ಕಪ್ಪಾ ಎಂದು ಕರೆಯುವ ಸದವಕಾಶ ಸಿಗಲಿಲ್ಲ.

ಅಪರಂಜಿಕಿಡಿ

—ಆನಂದ್

ನಾವು ಹಿಂದುಳಿದವರೆಂದು ಪರಿಗಣಿಸಲ್ಪಡಲು ಜನ ಮುನ್ನುಗ್ಗುತ್ತಿರುವುದು ಅಪರಂಜಿಗೆ ಸೋಜಿಗ ಅನ್ನಿಸುತ್ತೆ !

*   +   *

ರಾಜೀವರು ಆಗಸ್ಟ್ ಹದಿನೈದರ ಭಾಷಣದಲ್ಲಿ ಗಣತಂತ್ರ ದಿವಸ ಅಂದರಂತೆ. ವಾಕ್ ಸ್ವಾ–ತಂತ್ರ !

*   *   *

ಭಾರತದಲ್ಲಿ ಈಚೆಗೆ ಯಾವ ಯುದ್ಧವೂ ಆಗದಿದ್ದರೂ ರಸ್ತೆಗಳಲ್ಲಿ Pot holes ಹೇಗಾದುವೆಂದು ಸಾರ್ಕ್ ಪ್ರತಿನಿಧಿಗಳಿಗೆ ಆಶ್ಚರ್ಯವಾಗಬಹುದು !

*   *   *

ಈ ವರ್ಷ ಒಲಿಂಪ್ಯಾಡ್ ಕ್ರೀಡೆಗಳು ಸೋಲ್‌ನಲ್ಲಿ ನಡೆಯುವುದರಿಂದ, ಭಾರತದ ಪಟುಗಳಿಗೆ ಗೆಲ್ಲಲು ಕಷ್ಟವಾಗಬಹುದು !

*   *   *

ಕೇರಳದ ಸುದ್ದಿ

ಕೇಂದ್ರದ ಆಂತರಿಕ ಭದ್ರತಾ ರಾಜ್ಯ ಸಚಿವರ ಮನೆಯಲ್ಲಿ ಕಳ್ಳತನ.

ಟೀಕೆ ಅನಗತ್ಯ !

*   *   *

ಪ್ರಜಾಪ್ರಭುತ್ವ ಅಂದರೆ, ಯಾರು ಏನಾದರೂ ಮಾಡಬಹುದು ಎಂದರ್ಥ.

—ಶ್ರೀ ಜೇಲ್‌ಸಿಂಗ್

ಹಾಗೇ ಕಾಣತ್ತೆ !

ಭಯೋತ್ಪಾದಕರೆಂದು ಮಹಿಳಾ ಶಿಕ್ಷಕರೊಬ್ಬರ ಬಂಧನ.

—ಸುದ್ದಿ

ನಮ್ಮ ಕಾನ್ವೆಂಟ್ ಸ್ಕೂಲಿನ ಜ್ಞಾಪಕ ಬರುತ್ತೆ !

*   *   *



ಏನೋ ಚಳುವಳೀಗೆ ಸೇರಲ್ವ ಬಲಿಹಾಕ್ಬುಡ್ತೀನಿ.
ನೀನು ಮುಂದುವರಿಯೋದು ಹೇಗೆ.

ನಿಮ್ಮ ಬುದ್ಧಿಗೊಂದು ಸವಾಲು

—ಚಂದ್ರು

ಮೊನ್ನೆ ಕಂಪ್ಯೂಟರ್ ಪ್ರೊಗ್ರಾಮಿಂಗ್ ಕ್ಲಾಸ್ ಸೇರಿದ ಮೇಲೆ ಜ್ಞಾನೋದಯ ಆಯ್ತು. ನೋಡಿ, ಯಾಕೆ ನಮ್ಮ ಬಡಾವಣೆ Boys ಎಲ್ಲಾ BASIC ಅಂದ್ರೆ, ಬಾಯಿ ಬಾಯಿ ಬಿಡುತ್ವೇ ಅಂತ. ಕ್ಲಾಸಿನಲ್ಲಿ ಅರ್ಧಕ್ಕರ್ಧ ತರುಣೀರು. ರಂಭೆ ಅಥವಾ ಊರ್ವಶಿ, ದಾರಿ ತಪ್ಪಿ ನಮ್ಮ ಕ್ಲಾಸಿಗೇನಾದರೂ ಬಂದಿದ್ರೆ, ಹೊಟ್ಟೆ ಕಿಚ್ಚಿನಿಂದ ಉರಿದು ಬೂದಿ ಆಗ್ತಿದ್ರು. ಅಂತಹ ಚೆಂದುಳ್ಳಿ ತರುಣೀರ ಜೊತೆ ನಮ್ಮ ಪಾಠ ! ಈ ಕಂಪ್ಯೂಟರ್ ಕನ್ಯೆಯರ ಮೋಹಕತೆಗೂ ಅವರ ಪ್ರೊಗ್ರಾಮಿಂಗ್ ಗೀಳಿಗೂ ಏನೋ ವಿಚಿತ್ರ ನಂಟು. ಯಾರಾದ್ರೂ ರಿಸರ್ಚ್ ಮಾಡ್ಬೇಕು ಇದರ ಬಗ್ಗೆ. ಇರಲಿ.

ನಮ್ಮ ಕ್ಲಾಸಿನ ಅಪ್ಸರೇರಲ್ಲಿ ನಾಲ್ಕು ಜನ ಮಾತ್ರ ಕ್ರೀಮ್ ಡಿಲಾ ಕ್ರೀಮ್ ಅಂತಾರಲ್ಲಾ ಹಾಗೆ. ಕಾಕತಾಳನ್ಯಾಯದಂತೆ ಇವರೆಲ್ಲಾರ ಮನೆಗಳು 1ನೇ ಕ್ರಾಸ್, 2ನೇ ಕ್ರಾಸ್ 3ನೇ ಕ್ರಾಸ್ ಹಾಗೂ 4ನೇ ಕ್ರಾಸ್‌ಗಳಲ್ಲಿ. ಆದರೆ ಒಂದೇ ಬಡಾವಣೇಲಿಲ್ಲ. ಜಯನಗರದ ತರುಣಿಯರಲ್ಲಿ ಒಬ್ಬಳು 3rd ಬ್ಲಾಕ್ ನಲ್ಲಿದ್ದರೆ ಇನ್ನೊಬ್ಬಳು 'T' ಬ್ಲಾಕ್ ಬನಶಂಕರಿ ಭಗಿನಿಯರಲ್ಲಿ ಒಬ್ಬಳು I ಸ್ಟೇಜ್ ಇನ್ನೊಬ್ಬ ಮೋಹನಾಂಗಿ II ಸ್ಟೇಜ್.

ಬೆಂಗಾಲೀ ಬ್ಯೂಟಿ ಬನಶಂಕರೀಲಿ ವಾಸ. ದೀಕ್ಷಾ 'T' ಬ್ಲಾಕ್ ತರುಣಿ. ಪೋನೀಟೇಲ್ ಯುವತಿ 3ನೇ ಕ್ರಾಸ್‌ನಲ್ಲಿ. ಜಯನಗರದ ಜೋಡಿಯಲ್ಲಿ ಒಬ್ಬಳು ಬಾಬ್, ಇನ್ನೊಬ್ಬಳು ನೀಳವಾದ ಜಡೆ. 1ನೇ ಕ್ರಾಸ್ ಹುಡುಗಿ ಬನಶಂಕರಿಯಿಂದ ಬರ್ತಾಳೆ.

ಚಿತ್ರಾ ಕೇರಳದ ಕನ್ಯೆ ಅಲ್ಲ, ಅಲ್ಲದೇ ಅವಳ ಮನೆ 1ನೇ ಕ್ರಾಸ್‌ನಲ್ಲೂ ಇಲ್ಲ, 3ನೇ ಕ್ರಾಸ್‌ನಲ್ಲೂ ಇಲ್ಲ. ಅಪರ್ಣಾ ಬನ್‌ಗಂಟು ಹಾಕಿಲ್ಲ. ದೀಕ್ಷಾ ಬಾಬ್ ಮಾಡಿಸ್ಕೊಂಡಿಲ್ಲ. ಭಾವನಾ II ಸ್ಟೇಜ್‌ನಲ್ಲಿಲ್ಲ. 3ನೇ ಕ್ರಾಸ್ ಹುಡುಗಿ ಬೆಂಗಾಲೀ ಅಲ್ಲ ಮತ್ತೆ 4ನೇ ಕ್ರಾಸ್ ಹುಡುಗೀಗೆ ಬಾಬ್ ಅಂದ್ರೆ ಆಗ್ದು. ಕನ್ನಡದ ಕುವರಿ 2ನೇ ಕ್ರಾಸ್‌ನಲ್ಲಿಲ್ಲ ಮತ್ತು ಯಾಕೆ ಜಡೆ ಹಾಕಿಲ್ಲ ಅಂತ ಕೇಳಿದ್ರೆ, ಕೋಕಿಲ ಕಂಠದಿಂದ "ಈಕ್, ಓಲ್ಡ್ ಫ್ಯಾಷನ್ಡ್" ಅಂತ ತಿಳಿಗನ್ನಡದಲ್ಲಿ ಉಲೀತಾಳೆ.

ಮರಾಠಿ ಮುಗ್ಧೆಯ ಪೂರ್ಣ ವಿವರ ಹೇಳಿ ನೋಡೋಣ ?

ನಿಮ್ಮ ಉತ್ತರ 20–11–86 ರೊಳಗೆ ತಲುಪಬೇಕು. ಉತ್ತರ ಸರಿಯಾಗಿದ್ದರೆ ಒಂದು ವರ್ಷದ ಚಂದಾ ಬಹುಮಾನ. ಸರಿಯುತ್ತರ ಮುಂದಿನ ಸಂಚಿಕೆಯಲ್ಲಿ. ○

ತೋಳ ಕುರಿಮರಿ ಕತೆ

(ವೈಜ್ಞಾನಿಕವಾಗಿ ಪರಿಷ್ಕರಿಸಲ್ಪಟ್ಟಿದೆ) ಜಿ.ಎನ್.ಜಿ

ಗಡವ ತೋಳದ ರಕ್ತ ಕುದಿಯಿತು. ಅದು ವನ್ಯಪಶುಗಳ ಸಭೆ ಕರೆದು ಹೀಗೆಂದಿತು.

ಮಿತ್ರರೇ, ಕುರಿ ನಮ್ಮ ಆಹಾರ. ಆದರೆ ಕುರಿಗಳು ನಾಗರಿಕ, ಶಿಷ್ಟ ಪ್ರಾಣಿಗಳು. ಪ್ರಪಂಚಕ್ಕೆ ಅವುಗಳಿಂದ ನಮಗಾಗಿರುವ ಅನ್ಯಾಯ ತಿಳಿಯುತ್ತಿಲ್ಲ. ಅವು ಶಿಷ್ಟ, ನಾವು ವನ್ಯ, ದುಷ್ಟ ಎಂದು ಕರೆದು ನಮ್ಮನ್ನು ಕ್ರೂರ, ಹಿಂಸ್ರ ಪ್ರಾಣಿಗಳು ಎಂದು ಕರೆಯುತ್ತಿದೆ. ಈ ಕುರಿಗಳು ಊರು ಕಟ್ಟಿ ನಮ್ಮನ್ನು ನಾಗರಿಕ ಸೌಲಭ್ಯಗಳಿಂದ ವಂಚಿಸಿ ಶೋಷಿಸುತ್ತಿವೆ"

ಅಲ್ಲೆ ಇದ್ದ ನರಿ ಕಿಸಕ್ಕನೆ ನಕ್ಕಿತು ತೋಳ ಕೇಳಿತು

"ನರಿರಾಯ, ನೀನು ಅಭಿಮಾನ ಶೂನ್ಯ ಮಹತ್ವಾಕಾಂಕ್ಷೆಯಿಲ್ಲದ ಹೇಡಿ. ಏಕೆ ನಕ್ಕೆ?"

ನರಿಯೂ ಸವಾಲೆಸೆದಿತು:

"ನಿನಗೆ ಹೆಸರುಬೇಕೋ, ಕೊಸರುಬೇಕೋ? ಕೊಸರು ಬೇಕು. ಕುರಿಯ ಮೇಲೆ ಒಂದಿಷ್ಟು ಕೊಸರು ಬೇಕು ತಾನೇ.

ತೋಳ "ಭಲೇ, ಚಾಂಗು. ಹೇಳು ಕೇಳುತ್ತೇವೆ." ಎಂದಿತು.


ನರಿ ಉವಾಚ :

"ಕುರಿಗಳೇ ಶಿಷ್ಟವಾಗಿರಲಿ-ಶಾಶ್ವತವಾಗಿ. ಆ ಹಣೆ ಪಟ್ಟಿಗೆ ಕಟ್ಟಿದ ಹಗ್ಗದಿಂದಲೇ ಅವಕ್ಕೆ ಉರುಲು ಹಾಕೋಣ.

ನಮ್ಮಲ್ಲಿ ಕೆಲವರು ಊರು ಸೇರೋಣ. ನಮ್ಮ ಕಾಡಿನಲ್ಲುಳಿದ ಬಂಧುಗಳಿಗೆ, ಸವಲತ್ತುಗಳನ್ನು ಕೇಳುತ್ತಾ, ಒಂದೊಂದೇ ಕುರಿಗಳನ್ನು ನುಂಗೋಣ. ಕುರಿಗಳು ಹೇಳಿ ಕೇಳಿ ಬಕರಾಗಳು. ತೆಪ್ಪಗಿರುತ್ತವೆ. ಅವಕ್ಕೆ ಕ್ರಾಂತಿ ಎಂದರೆ ಕಾಲುನಡುಕ. ಅವುಗಳಲ್ಲೊಂದಕ್ಕೆ ಪಟ್ಟಕಟ್ಟಿ, ಕಾಡುಪ್ರಾಣಿಗಳಿಗೆ ಶತಮಾನಗಳಿಂದಾಗಿರುವ,

ಆಗುತ್ತಿರುವ, ಆಗಬಹುದಾದ ಅನ್ಯಾಯಗಳನ್ನು ಸರಿಪಡಿಸುವ ಕೆಲಸಕೊಡೋಣ. ತೋಳ ಮತ್ತು ಸ್ನೇಹಿತರಿಗಾದ ಅನ್ಯಾಯದ ಪಾಪವನ್ನು ತೊಳೆಯಲು ಕುರಿಗಳು (ಪ್ರಾಣ?)ತ್ಯಾಗ ಮಾಡುವುದೊಂದೇ ಮಾರ್ಗ ಎಂದು ಹೇಳೋಣ. ಕುರಿಗಳು ಸಂತೋಷದಿಂದ ತಲೆಬಾಗುತ್ತವೆ. ಅಲ್ಲೊಂದು ಇಲ್ಲೊಂದು 'ಬ್ಯಾ ಎಂದರೆ ಕೇಳುವವರಾರು! ಹೀಗೆ ತಲೆ ಬಾಗಿದ ಕುರಿಗಳನ್ನು ನುಂಗುವುದು ಸುಲಭ. ರಾಜನೂ ಒಪ್ಪುತ್ತಾನೆ-ಗದ್ದಿಯ ಭೋಗ ಇರಲು ಇದರ ತಂಟೆಗೇಕೆ ಬರುತ್ತಾನೆ!

ತೋಳ ತಲೆದೂಗಿತು. ತೋಳಗಳು ಊರಿಗೆ ನುಗ್ಗಿದವು. ಕುರಿ ಹಿಂಡು ತಲೆ ಬಾಗಿ ಮುನ್ನುಗ್ಗುತ್ತಿರಲು, ತೋಳಗಳು ಒಂದೊಂದೇ ಕುರಿಯನ್ನು ಹಿಂದಿನಿಂದ ನುಂಗುತ್ತಾ ಬಂದವು. ಕುರಿ ಹಿಂಡಿನ ಸಂಖ್ಯೆ ಮುಗಿಯುತ್ತಾ ತನ್ನ ಸರದಿ ಹತ್ತಿರವಾಗುತ್ತಿದ್ದುದು ಕುರಿ ರಾಜನಿಗೆ ತಿಳಿಯ ಲೇ ಇಲ್ಲ.



ಶೌಚಾಲಯದ ಉದ್ಘಾಟನೆಗಾಗಿ ಮಾನ್ಯ ಸಚಿವರು ಒಳಪ್ರವೇಶಿಸಿದ್ದಾರೆ
ಇನ್ನೆರಡು ನಿಮಿಷ ಬಿಟ್ಟು ಎಲ್ಲರೂ ಜೋರಾಗಿ ಚಪ್ಪಾಳೆ ತಟ್ಟಬೇಕಾಗಿ ಪ್ರಾರ್ಥನೆ.

ಬೆಂಗಳೂರು ಇಂದು-೮

—ನಳಿನೀ ಪ್ರಿಯ

ಸಾರ್ಕ್ ಸಿದ್ಧತೆ

ಬೆಂಗಳೂರಿನಲ್ಲಿ ಎಲ್ಲೆಲ್ಲಿ ನೋಡಿದರೂ ರಿಪೇರಿ ಕೆಲಸ, ಸಡಗರ, ಸಂಭ್ರಮ. ಕವಿಯೊಬ್ಬರು ಹಾಡಿದ "ಮಂಗಳ ಮಸಗಿತು ಮೈಸೂರರಮನೆ, ಸಿಂಗರವಾಯಿತು ಮೈಸೂರು" ತುಣುಕು ಜ್ಞಾಪಕಕ್ಕೆ ಬರುತ್ತೆ. ಮೈಸೂರು ಬದಲು ಬೆಂಗಳೂರು ಅಂತ ಓದಿಕೊಂಡು ಬಿಟ್ಟರೆ ಸಾಕು. ದಕ್ಷಿಣ ಏಷ್ಯಾದ ವರಿಷ್ಠರ ಶೃಂಗ ಸಭೆಗೆ ಅದ್ದೂರಿ ತಯಾರಿ. ಸರ್ಕಾರದ ಸುತ್ತೋಲೆ ಬೇರೆ, "ಮುಖ್ಯ ಬೀದಿಗಳಲ್ಲಿನ ಖಾಸಗೀ ಅಂಗಡಿ ಮಾಲೀಕರು ತಮ್ಮ ಮಳಿಗೆಗಳಿಗೆ ಸುಣ್ಣ ಬಣ್ಣ ತೊಡಿಸಿ, ನಗರವನ್ನು ಅಂದ ಗೊಳಿಸಬೇಕು" ಅಂತ.

ಯಾಕೆ ಹೇಳುಕ್ಕೆ ಬಂದೆ ಅಂದ್ರೆ, ನನ್ನ ಮಿತ್ರ ಚಿನ್ನಸ್ವಾಮಿ ಶೆಟ್ಟಿ ಹತ್ರ ಅದೂ ಇದು ಮಾತಾಡ್ತಾ ಇದ್ದಾಗ SAARC ವಿಷ್ಯ ಬಂತು. ಆವನ ಅಂಗ್ಡಿ ಎಂ.ಜಿ. ರಸ್ತೇಲಿ. ಕರಕುಶಲ ವಸ್ತು ಮಳಿಗೆ. ಒಳ್ಳೇ ವ್ಯಾಪಾರ, ಚಿನ್ನಸ್ವಾಮಿ ಶಾಂತಸ್ವಭಾವದ ಮನುಷ್ಯ, ಚಿನ್ನದಂತಹ ಹೃದಯ, ಕುಳ್ಳ ಶರೀರ, ಮೈ ಬಣ್ಣ, ಕೈಲಾಸಂ ಹೇಳ್ತಿದ್ದ ಹಾಗೆ 'ತೊಳೆದ ಕೆಂಡ'! ಮೇಲಿನ ಮೂರು ಹಲ್ಲು ಉಬ್ಬು ಅದರಲ್ಲಿ ಮಧ್ಯದ್ದು ಬಿದ್ದಾಗಿನಿಂದ ಮುಖಕ್ಕೆ ಒಂದು ವಿಚಿತ್ರ ಡ್ರಾಕುಲ ಕಳೆ. ಇನ್ನು ಬಟ್ಟೆ ಬರೇನೋ, ಮಾಸಿದ ಪಂಚೆ, ಕ್ಲೋಸ್ ಕಾಲರ್ ಕೋಟು. ಅದು ನಿಜವಾಗಿ ನೋಡಿದ್ರೆ open ಕಾಲರ್ ಕಾರಣ ಮೇಲಿನ ಎರಡು ಗುಂಡಿಗಳು ಎಂದೋ ಬಿದ್ದು ಹೋಗಿದ್ವು.

"ಸಾರ್ಕ್ ತಯಾರಿ ಹೇಗಿದೆ?" ಕುತೂಹಲದಿಂದ ಕೇಳಿದೆ.

"ಸಾರ್ಕ್ ಮನೆ ಹಾಳಾಯ್ತು. ಮುಖ್ಯ ಬೀದೀಲಿದೀವಿ, ಚೆನ್ನಾಗಿರ್ಲಿ ಅಂತ ನಾನೂ ಸುಮಾರು ಖರ್ಚು ಮಾಡಿ ಅಂಗಡೀಗೆ ಬಣ್ಣ ಹಾಕಿಸ್ದೆ. ಮೊನ್ನೆ ಮೂವರು ಅಧಿಕಾರಿಗಳು ಬಂದಿದ್ರು, "ನಗರ ಸುಂದರವಾಗಿಡಿ" ಸಮಿತಿಯವರಂತೆ. SAARCನ ಹಲವು ಗಣ್ಯರು ನಿಮ್ಮ ಅಂಗಡೀಗೂ ಬರಬಹುದು ಅಂದ್ರು. ನಾನೂ ನನ್ನ ದುರಸ್ತಿ

ಕೆಲಸಾನೆಲ್ಲಾ ಹೇಳ್ದೆ. ಸಂತೋಷಪಟ್ರು. ಇನ್ನೇನಾದ್ರೂ ಇದ್ರೆ ಹೇಳಿ. ನಡಸ್ಕೊಡ್ತೀನಿ ಅಂದೆ. ಒಬ್ಬ ಸ್ವಲ್ಪ hesitate ಮಾಡ್ತಾ ಹೇಳ್ದ. "ನೋಡಿ ರಾಯ್ರೆ ಗಣ್ಯ ಅತಿಥಿಗಳು ಬಂದಾಗ ನಗರವೆಲ್ಲಿ ಎಲ್ಲಾ ಸುಂದರವಾಗಿ ಕಾಣಿಸ್ಬೇಕು ಅನ್ನೋದನ್ನ ನೀವೂ ಒಪ್ಕೋತೀರ. ಅವರು ಬರೋ ಮೂರುದಿನ ತಾವು ಮನೇಲಿ ಇರಕ್ಕಾಗುತ್ತ್ಯೆ? ನಿಮ್ಮ sales girls ಚುರುಕು. ಅವ್ರೇ ವ್ಯಾಪಾರ ನೋಡ್ಕೋತಾರೆ" ಅಂದ್ಬಿಟ್ಟ ತಲೆಹರಟೆ ನನ್ಮಗ. ಅವ್ನಿಗೆ ಗರಾ ಬಡಿಯಾ !" ಅಂತ ಕೂಗಾಡಿದ ಚಿನ್ನು.

ನಗರದ ಸಾಲಮೇಳ

ಮೊನ್ನೆ ಸಂಜೆ ಬ್ಯಾಂಕ್ ಮ್ಯಾನೇಜರ್ ಪ್ರಭು ನಮ್ಮ ಮನೇಗೆ ಬಂದಿದ್ದ, ನೋಡಿದ ಕೂಡಲೇ ಗಾಭರಿ ಆಯ್ತು. ಕೈ ಮೈ ಎಲ್ಲಾ ಬ್ಯಾಂಡೇಜ್ ಹಣೇಗೆ ಪಟ್ಟಿ. ಶತ್ರುಘನ್ ಸಿನ್ಹಾ ಹತ್ರ ಏಟು ತಿಂದ ಅಮಿತಾಭ್ ತರ ಇದ್ದ ಮುಖ.

"ಯಾಕೋ ಏನಾಯ್ತು?"

"ಪೂಜಾರೀ ಕೊಟ್ಟವರ ಕಣೋ. ನಗರದ ಬಡವರಿಗೆ ಸಾಲಮೇಳ ನಡೆಸಿದ್ವಿ. ಒಂದು ತಿಂಗಳ ಹಿಂದೆ. ಮೊನ್ನೆ ಒಬ್ಬ ಗಿರಾಕಿ ಬಂದಿದ್ದ. ಐದು ಸಾವಿರ ಕೊಡ್ರಿ ಅಂತ ಕೇಳ್ದ. ಯಾತಕ್ಕಣ್ಣಾ ಅಂತ ಅತಿವಿನಯವಾಗಿ ಕೇಳ್ದೆ. ಗಾಡೀ ತೊಗೋತಿನಿ ಅಂದ, ಗಾಡಿ ಆಧಾರ ಇಡಬೇಕು ಅಂತ ನಮ್ಮ ನಿಯಮದ ಪ್ರಕಾರ ಹೇಳ್ದೆ. ಆಸಾಮಿ ಮಾತಿಲ್ದೆ ಹೊರಟು ಹೋದ. ಅರ್ಧ ಘಂಟೆನಂತರ ಮೂರು ಪ್ಯಾದೆಗಳು ಪ್ರತ್ಯಕ್ಷ ಆದ್ರು. ಕೇಂದ್ರ, ಹಣಕಾಸು ಖಾತೆಯವರಂತೆ. ಬಂದೋರೆ "ಬಡವರ ಸಾಲಕ್ಕೆ ಆಧಾರ ಕೇಳಿದ್ರೆ ಉಗ್ರಶಿಕ್ಷೆ ಅಂತ ಗೊತ್ತಿಲ್ವೇನ್ರಿ?" ಅಂತ ಗದರಿಸಿದ್ರು. ಉತ್ತರ ಕೊಡೋ ಅಷ್ಟರಲ್ಲಿ ಉಗ್ರ ಶಿಕ್ಷೆ ಶುರುಮಾಡೇ ಬಿಟ್ರು. ಮೈಕೈ ಎಲ್ಲಾ ಏಟು. ಚೆನ್ನಾಗಿ ತದುಕಿ ಹೊರಟು ಹೋದರು. ನನಗೆ ವಿಪರೀತ ಕೋಪ ಬಂದ್ಬಿಡ್ತು. ಡೀ ಎಂ ಗೆ phone ಮಾಡಿದೆ ದೂರು ಹೇಳುಕ್ಕೆ. ಅವರ P.A. ತೊಗೊಂಡ. "ಡೀ ಎಂ ಹಾಸ್ಪಿಟಲ್‌ನಲ್ಲಿದ್ದಾರೆ ಅಂದ" ಅವ್ರಿಗೂ ಆಯ್ತಂತೆ ಉಗ್ರ ಶಿಕ್ಷೆ!"

ಸಚ್ಚಿಯ ದಯಾಪರತೆ

ಪೀಣ್ಯದ ಸಚ್ಚಿ ಸಣ್ಣ ಕೈಗಾರಿಕೋದ್ಯಮಿ. ಕೆಲಸದ ಮೇಲಿದ್ರೆ ಸಚ್ಚಿಗ ಯಾವ ಪರಿವೆಯೂ ಇರುಲ್ಲ. ಯಾರಾದರೂ ಕೆಲಸಗಾರರು ಬರ್ದೇ ಇದ್ರೆ ತಾನೇ ಮೆಷಿನ್

ನಡಸ್ತಾನೆ. ಕೆಲಸಗಾರರು ಒಬ್ರಲ್ಲ ಒಬ್ರು ತಪ್ಪಿಸ್ಕೊಳ್ತಾನೇ ಇರೋದ್ರಿಂದ ಯಾವಾಗ ನೋಡಿದ್ರೂ, ಸಚ್ಚಿ ಬಟ್ಟೆ ಎಲ್ಲಾ ಎಣ್ಣೆ ಮಸಿ.

ಮೊನ್ನೆ ಸಚ್ಚಿ ಪೀಣ್ಯದಿಂದ ಮನೇಗೆ ಹೋಗ್ತಿದ್ದಾಗ, ಯಶವಂತಪುರದಲ್ಲಿ ಮೋಟಾರ್ ಸೈಕಲ್ ಸಂಪು ಹೂಡ್ತು. ಹತ್ತಿರದಲ್ಲೇ ರಿಪೇರಿ ಅಂಗ್ಡಿ. ಅಲ್ಲೊಂದು ಪಿಳ್ಳೆ ಕೂತಿತ್ತು. ಹತ್ತು ಹನ್ನೆರಡು ವರ್ಷ ಇರಬಹುದು. ತೀರ ಎಳಕು.

"ಕ್ಯಾ ಸಾಮಿ, ನಿಮ್ಗೂಕೆ ಏನ್ಬೇಕು ?" ಅಂತ ತಿಳಿಗನ್ನಡದಲ್ಲಿ ಕೇಳಿತು-

ಸಚ್ಚಿ ವಿಷಯ ಹೇಳಿ. ಹುಡುಗ ಕೆಲಸ ಮಾಡೊದನ್ನೇ ನೋಡ್ತಾ ನಿಂತ. ನೋಡ್ತಾ, ನೋಡ್ತಾ ಸಚ್ಚಿಗೆ ಕರುಣೆ ಉಕ್ಕಿ ಬಂತು, ಹರಕು ಷರಟು, ಹರಕು ಚಡ್ಡಿ, ಕೆದರು ಗಡ್ಡಿ ಕಾಲುಗಳು. ಸ್ಕೂಲಿಗೆ ಹೋಗಿ, ಸಂಜೆ ಆಟ ಆಡ್ತಾ ಇರ್ಬೇಕಾಗಿದ್ದ ಹುಡುಗ, ದುಡೀತಾ ನಿಂತಿದೆಯಲ್ಲಾ. ರಿಪೇರಿ ಕೂಲಿ ಜತೇಗೆ ಒಂದು ಐದು ರೂಪಾಯಿ ಬಕ್ಷೀಸು ಕೊಟ್ಟು, ಒಂದು ದಿನದ ಮಟ್ಟಿಗಾದ್ರೂ ನನ್ನ ಮನಸ್ಸಾಕ್ಷಿನ ಸುಮ್ನಿರಸ್ತೀನಿ ಅಂದ್ಕೊಂಡ.

ಅಷ್ಟು ಹೊತ್ತಿಗೆ ಹೊಸಾ ಎನ್‌ಫೀಲ್ಡ್ ಗಾಡೀಲಿ ಒಬ್ಬ ಧಡೂತಿ ಆಸಾಮಿ ಬಂದಿಳಿದ. ಸಫಾರಿಸೂಟು ಚಿನ್ನದ ಚೈನು, ಕೂಲಿಂಗ್ ಗ್ಲಾಸ್ ಇತ್ಯಾದಿ. ಸಚ್ಚೀನ ನೋಡಿ

"ಇಲ್ಲೋಡು. ನನಗೆ ಬಹಾಳ ಅರ್ಜೆಂಟ್ ಇದೆ. ಇಂಜನ್ ಟ್ಯೂನ್ ಅಪ್ ಮಾಡಿ ಅರ್ಧ ಘಂಟೇಲಿ ರೆಡಿ ಮಾಡ್ಬೇಕು. ನಿನ್ನ ಮುಖ ನೋಡಿದ್ರೆ ಬೆಳಗಿನಿಂದ ಕೆಲ್ಸ ಇಲ್ಲದ್ದಾಗೆ ಕಾಣುತ್ತೆ. ತಗೋ ಐದುರೂಪಾಯಿ. ಕೆಲಸಕ್ಕೆ ಮುಂಚೇನೆ ಬಕ್ಷೀಸ್" ಅಂತ ಹೇಳಿ ಸಚ್ಚಿ ತೆರೆದ ಬಾಯನ್ನು ಮುಚ್ಚುಕ್ಕೆ ಮುಂಚೇನೆ ಸಫಾರಿ ಆಸಾಮಿ ಮಾಯವಾಗಿದ್ದ.


ಪ್ರಾಣಿದಯಾ ಸಂಘ

ಕಬ್ಬನ್ ಪಾರ್ಕಿನ, ವಿಕ್ಟೋರಿಯಾ ರಾಣಿಯ ಪ್ರತಿಮೆಯ ಇದಿರು ಒಂದು ಪುಟ್ಟ ಹೆಂಚಿನ ಕಟ್ಟಡ ಇದೆ. ಇದು ಪ್ರಾಣಿದಯಾ ಸಂಘದ ಕಛೇರಿ. ಅದರ ಪಕ್ಕ ಹಾದು

ಹೋಗುವ ಕಸ್ತೂರಿಬಾ ರಸ್ತೆಯಲ್ಲಿ ಒಂದು ಮಧ್ಯಾಹ್ನ ನಡೆದು ಹೋಗುತ್ತಿದ್ದೆ. ಎರಡು ಘಂಟೆ ಸುಡುಬಿಸಿಲು, ದಾರಿಯಲ್ಲಿ ಒಂದು ಜಟಕಾ ಉದ್ದದ ಪೈಪುಗಳನ್ನು ಎರಡು ಬದಿಯಲ್ಲೂ ಹೇರಿ ಒಬ್ಬ ಬಡಕಲು ಮುದುಕ, ಅಷ್ಟೇ ಬಡಕಲು ಕುದುರೆಯನ್ನ ಮುಂದೆ ಸಾಗಲು ಪ್ರೇರಿಸುತ್ತಿದ್ದ. ಅದು ಜಪ್ಪಯ್ಯ ಅಂದರೂ ಮುಂದೆ ಸಾಗಲಿಲ್ಲ. ಮುದುಕ ಚಾಟಿಯಿಂದ ಎರಡು ಬಿಗಿದ. ಅಷ್ಟರಲ್ಲಿ ಪ್ರಾಣಿದಯಾ ಸಂಘದ ಕಛೇರಿಯಿಂದ ಇಬ್ಬರು ಮಹಿಳಾ ಮಣಿಗಳು ಓಡಿಬಂದು, ಪೋಲಿಸ್ ಬೆದರಿಕೆ ಹಾಕಿ, ಸಂಘದ ಆವರಣಕ್ಕೆ ಕುದುರೇನ ಬಿಚ್ಚಿ ತರುವಂತೆ ಮುದುಕನಿಗೆ ಆಜ್ಞೆ ಇತ್ತರು. ಕುದುರೇನ ನೆರಳಿಗೆ ಕಟ್ಟಿದ ಮೇಲೆ, ಅದಕ್ಕೆ ನೀರು ಹಿಂಡಿ ಸರಬರಾಜು. ಮುದುಕ ಹತಾಶನಾಗಿ ಗಾಡಿ ಬದಿಯಲ್ಲಿ, ಬಿಸಿಲಿನಲ್ಲಿ ಕುಳಿತಿದ್ದ.

"ಬಿಸಿಲಿನಲ್ಲಿ ಯಾಕ್ರಾತಾ ಕುಳಿತಿದ್ದೀ ನೆರಳ್ನಲ್ಲಾದ್ರೂ ಕೂತ್ಕೋ ಬಾರ್ದಾ" ಅಂತ ಸಹಾನುಭೂತಿಯಿಂದ ಕೇಳಿದೆ.

ಅವ ಹೇಳ್ದ "ಬೆಳಗ್ನಿಂದ ಊಟ ಇಲ್ಲ. ಈ ಗಾಡೀಲಿರೋ ಪೈಪ್‌ನೆಲ್ಲಾ ನಾಲಕ್ ಘಂಟೇ ಒಳಗೆ ಮಾರ್ಕಟ್‌ಗೆ ಹಾಕಿದ್ರೇನೆ, ಇವತ್ತಿನ ಕೂಲಿ. ಈಗ ಕುದ್ರೇನ ಯಾವಾಗ ಬಿಡ್ತಾರೋ ಏನೋ, ನಮ್ಮಂಥ ಪಾಪಿಗಳ್ಗೆ ನೆರಳೇನು. ಬಿಸಿಲೇನು ಬಿಡಿ ಬುದ್ಧಿ !"



ಭದ್ರ ಕೊನೆಗೆ ಎಲ್ಲರೂ ಹೀಗೇ ಆಗ್ತಾರೆ ಅಲ್ವ!

— ಚಂದ್ರು

ಯಾತ್ರಿಕರ ಪತ್ರ

—ಕೇಫ

ಹೊನ್ನುಹಟ್ಟಿ ಟಿ.ವಿ. ಉದ್ಘಾಟನೆಯಿಂದ ನಿಧಾನವಾಗಿ ಚೇತರಿಸಿಕೊಂಡು ನಾವು ಸುಮಾರು ಹತ್ತು ಕಿ.ಮೀ. ತುಳಿದ ಮೇಲೆ ಮಾರಡಿ ಗ್ರಾಮಸಿಗ್ತು. ಕಲ್ಲಿನ ಮೇಲೆ ಬರೆದಿದ್ದ ಹೆಸರು ಓದಿ—ಚಂದಿ ಸೈಕಲಿಂದ ಇಳಿದ.

"ವಿಚಿತ್ರ ಹೆಸರು-ಹಾರ್ಟ್‌ಫೇಲ್ !" ಅಂದ ನನಗೊಂದು ಅರ್ಥವಾಗಲಿಲ್ಲ.

"ಏನಯ್ಯ ನೀನು ವದರ್ತಿರೋದು ?" ಅಂಧೆ – ನಾನೂ ಸೈಕಲಿಂದ ಇಳಿಯುತ್ತ.

ರಾಜುನೂ ಇಳಿದ.

"ಮಾರಡಿ–ತಮಿಳು ಶಬ್ದ ಕಣ್ರೋ–ಮಾರು ಅಂದ್ರೆ ಎದೆ–ಅಡಿ–ಅಂದ್ರೆ ಹೊಡಿ ಅಂತ-ಎದೆ ಹೊಡಿ ಅಥವಾ ಹಾರ್ಟ್‌ಫೇಲ್— ಅಂದ.

ಚಂದಿ ಹಿಂದೆ ಎರಡು ತಿಂಗಳು ತಲೆತಪ್ಪಿಸಿಕೊಂಡು ಮದ್ರಾಸಿನಲ್ಲಿ ಕಳೆದಿದ್ದ. ಇಂಥಾ ಶಬ್ದಗಳನ್ನೆಲ್ಲಾ ಕಲ್ತಿದ್ದ. ನಾವು ಮೂವರಲ್ಲಿ ಅವನೇ ತಮಿಳು ಎಕ್ಸ್‌ಪರ್ಟ್.

ಎಲ್ಲರಿಗೂ ಬಾಯಾರಿಕೆಯಾಗಿತ್ತು. ಯಾವ ಹೋಟ್ಲೂ ನಮ್ಮ ಕಣ್ಣಿಗೆ ಬೀಳಲಿಲ್ಲ. ನಮ್ಮ ದುರದೃಷ್ಟಕ್ಕೆ ಸರ್ವವ್ಯಾಪಿ ಕಾಕಾ ಚಾಯಾ ಅಂಗಡಿ ಕೂಡ ಇದ್ದ ಹಾಗಿರಲಿಲ್ಲ-ಮಾರಡಿಯಲ್ಲಿ.

"ಈ ಊರನ್ನ ಕಾನೇಷುಮಾರಿಯಿಂದ ಅಳಿಸೇ ಬಿಡಬೋದಯ್ಯ" ಅಂದ ರಾಜ–ಶಾನುಭೋಗರ ವಂಶಸ್ಥ.

'ಒಂದು ಕಾಕಾ ಚಾಯಂಗ್ಡಿ ಇಲ್ಲ ಪ್ರಾಯಶಃ ಈ ಊರಲ್ಲಿ ಒಂದು ಲಾಟ್ರೀ ಟಿಕೆಟ್ಟು ಕೂಡ ಸಿಗೋಲ್ಲ-ಮನುಷ್ಯನ ಬೇಸಿಕ್ ನೀಡ್ಸು" ಅಂದ ಚಂದಿ.

ಆಗ್ಲೇ ನನಗೆ ಚಂದಿ ಹೇಳಿದ ಪರೀಚರಣರ ಒದಿಕಪ್ಪು ತೊಪ್ವೆ ಜ್ಞಾಪಕಕ್ಕೆ ಬಂದಿದ್ದು. ರಾಕಾ ಹೋಟೆಲ್ ಚಾಯಾನ ರುಚೀಲಿ ಮೀರಿಸುತ್ತೆ ಅಂತ ಚಂದಿ ಹೇಳಿದ್ದ.

"ಚಂದಿ ನೀನಾಗ್ಲೇ ಒದಿಕಪ್ಪು ತೊಪ್ವೆ ಅಂದ್ಯಲ್ಲಾ.........

"ಅಂದ್ರೆ ಪುಳುಕ್ಲ್ಲ ?"

"ಏನು ಹಾಗಂದ್ರೆ ?" ಕೇಳಿದೆ ಕಂಗಾಲಾಗಿ.

"ಅದೇ ಕಣಯ್ಯ—ಒದಿಕಪ್ಪುತೊಪ್ವೆ ಆರ್ ಪುಳುಕ್ಲ್ಲ -ಪುಳುಕ್ಲ್ಲ–

ಏನು ಅದರ ವಿಷಯ ?" ಅಂದ.

"ಏನಿಲ್ಲ–ಅದೇ ರುಚೀಲಿ ಲಾಸ್ಟ್ ವರ್ಡ್ ? ಅಥವಾ ಬೇರಾವುದಾದ್ರೂ ರುಚಿ ನೋಡಿದ್ದಿಯಾ–ನಿನ್ನ ಅಜ್ಞಾತವಾಸದಲ್ಲಿ ?"

"ಒಯಸ್–ತಮಿಳರ ವತ್ತೆ ಕೊಳಂಬು ಅಂತ ಒಂದು ಐಟಂ ಇದೆ–ಅದು ಶಾಪಿಟ್ರಾ———

"ಅಂದ್ರೆ ?" ಕೇಳಿದೆ ಕಂಗಾಲಾಗಿ

"ಊಟ ಮಾಡಿದ್ರೆ ಎರಡು ದಿನ ನೀನು ಏನು ರುಚಿ ನೋಡಿದ್ರೂ ವತ್ತೆ ಕೊಳುಂಬು ಶಾಪಿಟ್ಟಾ ಮಾದ್ರೀನೇ ಇರುತ್ತೆ. ಅಂದ—

"ಚಂದಿ–ನಿಂಗೂ ಅವನಿಗೂ ಮಾತಾಡೋಕೆ ಬೇರೆ ವಿಷಯವೇ ಇಲ್ವೇನ್ರಯ್ಯ ಇಲ್ಲಿ ಹೊಟ್ಟೆ ತಾಳಾ ಹಾಕ್ತಿದೆ. ಅಂತ ರಾಜ ಘರ್ಜಿಸಿದ.

ಆಗ್ಲೇ ನಮಗೆ ದೇವರು ಪ್ರತ್ಯಕ್ಷವಾಗಿದ್ದು–ಒಬ್ಬ ಗಾಡಿಯವನ ರೂಪದಲ್ಲಿ. ಒಂದು ಒಂಟೆತ್ತಿನ ಗಾಡಿಯಲ್ಲಿ ಮಾರಡಿ ಹಳ್ಳಿಯ ರಸ್ತೆಯಿಂದ ಮೆಯಿನ್ ರಸ್ತೆಗೆ ಬಾಳೇಹಣ್ಣುಗಳ ಗೊನೆಗಳು–ಎಳೆ ನೀರು ತುಂಬಿಕೊಂಡು ಬರುತ್ತಿದ್ದ.

"ಅಯ್ಯಾ–ನಾವು ಪೇಟೆಯಿಂದ ಬಂದಿರೋರು–ತಲಕಾಡಿಗೆ ಹೊರಟಿದ್ದೇವೆ. ನಮಗೆ ಸದ್ಯದಲ್ಲಿ ತಿನ್ನೋಕೆ ಬಾಳೇಹಣ್ಣು-ಕುಡಿಯೋಕೆ ಎಳೆನೀರು ವದಗಿಸ್ತೀಯಾ?" ಅಂತ ಕೇಳಿದೆವು.

"ಕ್ಷಮ್ಸೀ ಅಯ್ಯಾ–ಇದು ಅರ್ಕೇ ಅಣ್ಣು–ಗೋರ್ನಳ್ಳಿ ಕಾಳಭೈರವನ ಗುಡೀ ಗೋಯ್ತಾ ಇದೀನ್ರ—ನನ್ನ ಮಗಿಗೆ ಸನ್ನಿ ಆಗೈತೆ–ಅರಸ್ಕೊಂಡೀವಿ .. .. ಮುಟ್ಬ್ಯಾಡ್ರಿ. ಅಂದ.

"ಈ ಹಣ್ಣು ಎಳ್ನೀರು ಏನ್ಮಾಡ್ತಾರೆ ದೇವರಿಗೆ ?" ರಾಜ ಕೇಳಿದ.

"ಅಭಿಷೇಕ ಮಾಡ್ತಾರೆ... ... ಅಂದ.

"ಅಂದ್ರೇ ಈ ನಿನ್ನ ನೂರು ಬಾಳೇಹಣ್ಣುಗಳನ್ನು ಸುಲಿದು ದೇವರಿಗೆ ಮೆತ್ತ ತಾರೆ ಆಮೇಲೆ ಎಳನೀರ್ನ ಹಾಕಿತೋಳೀತಾರೆ-ಅಲ್ವೆ ?"

"ಔದ್ರು—ಆ ತೀರ್ತಾನ ಮಗಿಗೆ ಕುಡಿಸ್ಬೇಕ್ರು"

"ಎಲ್ಲಿ ಬರ್ತದೆ ತೀರ್ಥ"

"ಗುಡೀ ಒರಗ್ರು-ಒಂದು ತೊಟ್ಟೀಲಿ ಬಿಳ್ತೈತಿ–

ಇದ್ರಾಗೆ ನೂರಣ್ಣು ನೂರೆಳ್ನೀರವೆ" ಅಂದ........

"ಅಯ್ಯಾ ನಿನ್ನ ಮಗೂಗೆ ಔಷಧಿ ಕೊಡ್ಲಿಲ್ವಾ—

"ಡಾಕಟ್ರು ಬಂದು ಆಸ್ಪತ್ರೆಗೆ ಸಾಗ್ಸು ಅಂದ್ರು. ಆಸ್ಪತ್ರೆ ಇರೋದು ಗೋರ್ನಳ್ಳೀಲ್ರು–ಆದ್ರೆ ನಮ್ಮ ಪೂಜಾರ್ರೇಳುದ್ರು–ಅರ್ಕೆ ಮಾಡ್ಕೊಸಾಕು ವಾಸಿಆಯ್ತು ದೇಂತ–

"ನಿನ್ನ ಮಗೂಗೆ ಖಾಯಿಲೆ ಏನಪ್ಪ ?"

"ವಾಂತೀನ್ರ–ತೀರ್ಥಕುಡ್ಸೊ ತನಕ ಏನೂ ಕೊಡ್ಬ್ಯಾಡಾಂದ್ರು ಅಂದ."

"ಅಯ್ಯಾ ನೀನೊಂದು ಕೆಲ್ಸ ಮಾಡ್ತಿಯಾ.... ನಿನ್ನ ಮಗೂ ಉಳೀಬೇಕಾರೆ ಮೈಗೆ ನೀರು ಸೇರ್ಬೇಕು ಇಂಜೆಕ್ಷನ್ ಕೊಡ್ಸು–ಆಮೇಲೆ ತೀರ್ಥ ಬಾಯಿಂದ ಕೊಡ್ಸೀ ವಂತೆ." ಅಂದ ಚಂದಿ–ಅವನೇ ನಮ್ಮ ಮೆಡಿಕಲ್ ಎಕ್ಸ್‌ಪರ್ಟೂ ಕೂಡ - ಅವನ ಸೋದರ ಮಾವನ ಮಗ ಒಬ್ಬ ಔಷಧೀ ಅಂಗ್ಡೀಲಿ ಕೆಲ್ಸ ಮಾಡ್ತಾನಂತೆ.

ಗೋರ್ನಳ್ಳಿ–ಮಾರಡಿಯಿಂದ ಎಂಟು ಕಿಲೋ ಮೀಟರ‍್ರು. ಚಂದಿ ರಾಜರಿಗೆ ಅದೇನು ಪುಣ್ಯದ ಮೇಲೆ ಹುಚ್ಚು ಹತ್ತಿತೋ ಗೊತ್ತಿಲ್ಲ-ಆ ಗಾಡಿಯೋನ ಪುಸಲಾಯಿಸಿ—ಅವನ ಮನೆಗೆ ಹೋಗಿ ಆ ಹೆಣ್ಣು ಮಗೂನ ತಮ್ಮ ಸೈಕಲ್ ಕ್ಯಾರಿಯರ್ ಮೇಲೆ ಕೂಡ್ಸಿಕೊಂಡು ಬಂದ್ರು–

"ತುಂಬಾ ಡೀ ಹೈಡ್ರೇಟ್ ಆಗಿದೆಯಯ್ಯಾ ಅಂದ ಚಂದಿ ಸೀನಿಯರ್ ಸರ್ಜನ್ ಸಾಹೇಬ್ರು ಹೇಳೋ ರೀತೀಲಿ.

ಗೋರ್ನಳ್ಳಿ ಸೇರಿದೆವು, ಗಾಡಿಯೋನ್ನ ದೇವಸ್ಥಾನದ ತೀರ್ಥ ಪ್ರೋಸೆಸಿಂಗ್ ಯೂನಿಟ್ಟಿಗೆ ಕೆಲ್ಸಕೊಟ್ಟು ಮಗೂನ ಆಸ್ಪತ್ರೆಗೆ ಕರ್ಕೊಂಡು ಹೋದ್ರು. ಡಾಕ್ಟರ್ ಸಿದ್ಧನಿಂಗಯ್ಯ ಅಂತ–ಇದ್ರು.

"ಇದು ಮಗು-ಮಾರಡಿಯಿಂದ ಕರ್ಕೊಂಬಂದಿದ್ದೇವೆ-ತುಂಬಾ ವಾಂತಿ ಆಗ್ತಾ ಇದೆ.. ....

"ಗೋರ್ನಳ್ಳಿ ಡಾಕ್ಟರು-ರೋಗಿ ಮುಖ ನೋಡಿದರು..........

"ಇದು ಮಾರಡಿ ಗಂಗಪ್ಪನ ಮಗು-ಎಲ್ಲವನು !" ಅಂದ್ರು.

"ಅರಕೆ ತೀರ್ಸೋಕೆ ಗುಡಿಗ್ಹೋಗಿದ್ದಾನೆ—ತೀರ್ಥ ತಕೊಂಡು ಬರ್ತಾನೆ... ....ನೀವು ಏನು ಮಾಡ್ಬೇಕೋ ಮಾಡಿ" ಅಂದ್ವು.

ಗಂಗಪ್ಪನ ಮಗಳನ್ನ ಡಾಕ್ಟರ್ ಸುಪರ್ದಿಗೆ ಒಪ್ಪಿಸಿ ನಾವು ದೇವಸ್ಥಾನದ ಕಡೆ ಹೊರಟವು. ಚಿಕ್ಕಗುಡಿ–ಆದರೂ–ಸುಮಾರು ಭಕ್ತರನ್ನು ಹೊಂದಿದ್ದ ದೇವಸ್ಥಾನ. ಅಲ್ಲಿ ಅಭಿಷೇಕಕ್ಕೆ ಅಣಿಯಾಗಿತ್ತು. ವಿಗ್ರಹದ ಮೇಲಿಂದ ಇಳಿದು ಬಂದ ನೈವೇದ್ಯವೆಲ್ಲಾ–ಕೆಳಗಿಳಿದು–ಒಂದು ಸಣ್ಣ ಚರಂಡಿ ಮೂಲಕ ಗರ್ಭಗುಡಿ ಗೋಡೆಯ ರಂಧ್ರದಿಂದ ಹೊರಕ್ಕೆ ಹರಿದು ಅಲ್ಲಿ ಒಂದು ತೊಟ್ಟಿಯಲ್ಲಿ ಬಿಳುತ್ತೆ, ಅದೇ ಪ್ರಸಾದ. ಆ ಪ್ರಸಾದ ಮೊದಲು ಅರ್ಪಿತವಾಗೋದು ನೊಣಗಳಿಗೆ ಕಾಗೆಗಳಿಗೆ ಮತ್ತು ಪಾವನವಾಗಬೇಕೂಂತ ಆಸೆಪಡೋ ಇತರೇ ಹುಳ ಹುಪ್ಪಟೆಗಳಿಗೆ.

ರಾಜ ನಾನು ಚಂದಿ-ಕಾಳಭೈರವನಿಗೆ ಕೈಮುಗಿದು ಹೊರಕ್ಕೆ ಬಂದು–ಅಲ್ಲೇ

ಇದ್ದ ಅಂಗಡೀಲಿ ಬಾಳೇಹಣ್ಣು ಕೊಂಡು ತಿಂದು ಎಳೇನೀರು ಕುಡಿದು—ಪುನಃ ಡಾಕ್ಟರಿಗೆ ನಮಸ್ತೆ ಹೇಳಿ ತಲಕಾಡು ದಾರಿ ಹಿಡಿದೆವು.

"ಈ ಥರಾ ದೇವಸ್ಥಾನಗಳಿಗೂ ಬ್ಲೂಸ್ಟಾರ್ ಆಪರೇಷನ್ ಮಾಡಬೇಕಯ್ಯ–ಆ ತೀರ್ಥದ ತೊಟ್ಟಿಗಳು ಮೆಷಿನ್‌ಗನ್ನುಗಳಷ್ಟೇ ಲೀತಲ್ಲು !" ಅಂದ ರಾಜ.

"ಜೋರಾಗಿ ಹೇಳ್ಬೇಡವಯ್ಯ—ನಮ್ಮನ್ನೂ ಕೇಳಿಸ್ಕೊಂಡೋರು ಹಿಟ್‌ಲಿಸ್ಟಿನಲ್ಲಿ ಸೇರಿಸಿಯಾರು !" ಅಂದೆ.

"ಶುದ್ಧ ಫಿರ್ಕಿ !" ಅಂದ ಚಂದಿ.

ಅದೇ ಮೂಡ್‌ನಲ್ಲಿ ಗೋರ್ನಳ್ಳಿಗೆ ಬೈ ಬೈ ಹೇಳಿದೆವು.



"ಹೇಗಿದ್ರೂ ಜ್ವರ ನಾರ್ಮಲ್‌ಗೆ ಬಂದಿದ್ಯಲ್ಲಾ, ಒಂದ್ವಿಷ್ಯ ಹೇಳೋಣಾಂತ..."

ಕಣ್ಣೀರಿಲ್ಲದೆ ವ್ಯಾಕರಣ

—ಅ.ರಾ.ಸೇ

ಈಚೆಗೆ ನನ್ನ ಶಿಷ್ಯೋತ್ತಮರಿಗೆ ಸ್ವಪ್ನವಾಸವದತ್ತವನ್ನು ಹೇಳಿಕೊಡುತ್ತಿದ್ದೆ. ಹಾಗೊಬ್ಬ ಹೀಗೊಬ್ಬ ತರಗತಿಗೆ ಸುಳಿಯುತ್ತಿದ್ದವರು ಸ್ವಪ್ನ ದೃಶ್ಯ ಬರುವ ಹೊತ್ತಿಗೆ ಹೌಸ್ ಫುಲ್ ಆಗುತ್ತಿತ್ತು. ನಂತರ ಪ್ರಿನ್ಸಿಪಾಲರು ಚೆಕ್ ಮಾಡಬಹು ದೆಂದು ಹೆದರಿ ವ್ಯಾಕರಣ ಆರಂಭಿಸಿದೆ. ನಾನೊಬ್ಬ ಸೃಜನಶೀಲ ಲೇಖಕನೆಂಬ ಕೊಬ್ಬಿನಿಂದ (ಅಥವಾ ಭ್ರಮೆಯಿಂದ) ಪಠ್ಯ ಪುಸ್ತಕವನ್ನು ಆಳವಾಗಿ ಅಭ್ಯಸಿಸುವ ಪದ್ಧತಿಯನ್ನು ಆಗಾಗ ಕೈಬಿಡುತ್ತೇನೆ.

ಅದಕ್ಕೋ ಏನೋ, ಅಥವಾ ವ್ಯಾಕರಣ ರಸವತ್ತಾಗಿರಲಿಲ್ಲವೆಂದೋ. ಶಿಷ್ಯರು ಕುಂಟುನೆಪ ಹೇಳಿ ಚಕ್ಕರ್ ಕೊಡಲಾರಂಭಿಸಿದರು. ಆಗ ನಾನು ವ್ಯಾಕರಣ ವನ್ನು ರಸವತ್ತಾಗಿ ಹೇಳಲು ಟೊಂಕಕಟ್ಟಿ ಅಭ್ಯಾಸ ಮಾಡಲಾರಂಭಿಸಿದೆ.

ನಾನು ಹಾಗೆ ಮಾಡಿದೆ, ನನಗೆ ಎಂಟೆದೆ, ನಿಮ್ಮ ಬಾಲ ಕತ್ತರಿಸಬಲ್ಲೆ ಎಂದು ಹುಡುಗರನ್ನು ಬೆದರಿಸಲು ಕನ್ನಡ ಮೇಷ್ಟರಿಗೆ ಹೇಗೆ ಸಾಧ್ಯ ? ಮಾನವ ಜಾತಿಯೇ ವಿನಾಶದತ್ತನುಗ್ಗುತ್ತಿದೆ ಯಾರು ಎಚ್ಚರಿಸಿದರೂ ಏನೂ ಪ್ರಯೋಜನವಿಲ್ಲ. ಎಂದ ಮೇಲೆ ವ್ಯಾಕರಣವನ್ನು ಹೇಳಲು ಆರಂಭಿಸಿದೊಡನೆ

"ಸಾ, ಇದ್ರಾಗೆ ಹೀರೋಯಿನ್ ಯಾರು?" ಎಂದು ದ್ಯಾಮಕೇಳಿದಾಗ, ನಾನು ಮನಸ್ಸಿನಲ್ಲೇ ಹಲ್ಲು ಕಡಿದು

"ಬರ್‍ತಾಳೆ, ಸ್ವಲ್ಪ ತಡಿ" ಎಂದುದರಲ್ಲಿ ಏನಾಶ್ಚರ್ಯ. ಗುಣಿತಾಕ್ಷರಗಳನ್ನು ಹೇಳಿಕೊಡುತ್ತಿರುವಾಗ 'ಲೌ' ಬರೆಯುವುದು ಹೇಗೆ ಎಂದು ಕೇಳಿದೆ. ದ್ಯಾಮ ಎದ್ದು ಬಂದು 'ಲವ್' ಎಂದು ಬರೆದ, ಆದುದರಿಂದ ಅವನಿಗೆ ಹೀರೋಯಿನ್ ಇಲ್ಲದ ಯಾವ ಪಾಠವೂ ರುಚಿಸುವುದಿಲ್ಲ ಎಂದು ತಿಳಿಯಿತು. ಹೀರೋ ಒಬ್ಬನು ಬೇಕಲ್ಲ. ಹಾಗಾಗಿ ವ್ಯಾಕರಣಕಾರನೇ ಆ ಹೀರೋ ಎಂದು ನಿಶ್ಚಯಿಸಿ, ವ್ಯಾಕರಣದ ರೊಮಾನ್ಸನ್ನು ಆಳವಾಗಿ ಅಭ್ಯಸಿಸಲಾರಂಭಿಸಿದೆ.

ನಮ್ಮ ಅಥವಾ ಯಾವ ಕಾಲೇಜಿಗೆ ಹೋದರೂ ಲೈಬ್ರರಿಯಲ್ಲಿ ವ್ಯಾಕರಣ ಗ್ರಂಥಗಳು ಸಿಕ್ಕಲಿಲ್ಲ. ಬುಕ್‌ಡಿಪೋಗೆ ಹೋಗಿ ವಿಚಾರಿಸಿದೆ 'ಸರಳ ವ್ಯಾಕರಣ' ಎಂಬ ಗ್ರಂಥವೊಂದು ಸಿಕ್ಕಿತು. ಅದು ಪ್ರಿಂಟಾಗಿದ್ದು ಯಾವಾಗ ಎಲ್ಲಿ ಎನ್ನುವ ದಾಖಲೆ ಏನೂ ಇರಲಿಲ್ಲ. ವ್ಯಾಕರಣಕಾರನು ಯಾರು ಎಂಬುದೂ ತಿಳಿಯಲಿಲ್ಲ, ಬೆಲೆಯೆಷ್ಟು ಎಂದು ಕೇಳಿದೆ: ನೀವು ದೊಡ್ಡಗುರುಗಳು. ಏನೂ ಕೊಡಬೇಡಿ, ಸದ್ಯ ಇದರ ಜಾಗದಲ್ಲಿ 'ಎಲ್ಲೆಲ್ಲೂ ಅವಳೇ' ಕಾದಂಬರಿಯ ಒಂದು ಪ್ರತಿಯನ್ನು ಇಡಬಹುದು' ಎಂದು ಹೇಳಿದ ಅಂಗಡಿಯವ ಕಾರ, ಕಾಫಿ ಕೊಡಿಸಿ ಕಳಿಸಿದ.

ಇಂತಹ ಅವಕಾಶದೊರೆತಾಗ ನಾನುಬಿಡುವೆನೇ? ನಮ್ಮ ಕನ್ನಡ ವ್ಯಾಕರಣವನ್ನು ಸರ್ವೀಸಿನ ಈಗಲಾದರೂ ಓದದೇ ಹಾಗೇ ಹೇಳಿಕೊಡಬಾರದೆಂದು ನಿರ್ಧರಿಸಿದೆ, ಗಡಿಯಾರ ನೋಡಿದೆ. ಮಂಗಳವಾರ, ಮಧ್ಯಾಹ್ನ ನಾಲ್ಕುಗಂಟೆ ಅಕ್ಟೋಬರ್ ಮುವತ್ತೆಂಟನೇ ತಾರೀಖು ಶುಭ ರಾಹುಕಾಲ. ಪಕ್ಷಛಿದ್ರ. ಇಂದಿನ ದಿನವೇ ಶುಭ ದಿನವು ಎಂದುಕೊಂಡು ಪುಸ್ತಕವನ್ನು ಕೈಯಿಂದ ನೇವರಿಸಿದೆ.

ಸಾ, ಸಾ, ಎಂದು ಯಾರೋ ಕೂಗಿದರು. ಹಿಂದಿರುಗಿ ನೋಡಿದರೆ ಪುಸ್ತಕದ ಅಂಗಡಿಯವನು ರೊಟ್ಟು ಸಿಗ್ತುಸಾ, ತಗಳ್ರೀ ಎಂದ.

ನೋಡಿದೆ ಸರಳಗನ್ನಡ ವ್ಯಾಕರಣವು, ವೈಯಾಕರಣಿ ಕುಲತಿಕಲ ಅಪಭ್ರಂಶ ನಾಗವರ್ಮನಿಂದ ವಿರಚಿತವಾದುದು. ಬೆಲೆ ಒಂದು ರೂಪಾಯಿ. ವ್ಯಾಕರಣ ಗಿಮ್ಮಿಕ ಪ್ರಕಾಶನ. ಓ ದೇವರೇ ಎಂದು ತಲೆಯೆತ್ತಿ ನೋಡಿದೆ ಪುರುಷರ ಸರ್ಕಾರಿ ಪುರುಷರ ತರಬೇತಿ ಕೇಂದ್ರ, ದ್ಯಾಪನಹಳ್ಳಿ ಎಂಬ ಬೋರ್ಡು, ಅದರ ಸಾಕ್ಷಿಯಾಗಿ ಕನ್ನಡವ್ಯಾಕರಣಕ್ಕೆ ಸರಳನ್ನು ಹೊಡೆಯಬಾರದು; ಎಲ್ಲರೂ ಇಂಟರೆಸ್ಟಿಂಗಾಗಿ ಕೇಳಬೇಕು; ಹಾಗೆ ಹೇಳುತ್ತೇನೆ ಎಂದು ಪ್ರತಿಜ್ಞೆ ಮಾಡಿದೆ.

ಈ ಪ್ರತಿಜ್ಞೆಯನ್ನು ಪೂರ್ಣಗೊಳಿಸಲು ದಿ ದ್ಯಾಮ ಪ್ರಾಬ್ಲಂ ಅನ್ನು ಪರಿಹರಿಸಬೇಕು, ಎಂದರೆ ವ್ಯಾಕರಣ ನಾಟಕಕ್ಕೆ ಒಂದು ಅಥವಾ ಒಬ್ಬ ಹೀರೊಯಿನ್ನನ್ನು ಕಂಡು ಹಿಡಿಯಬೇಕು.

ವ್ಯಾಕರಣ ಕರ್ತರು (ಎಂದರೆ ಅಪಭ್ರಂಶ ನಾಗವರ್ಮರು) ಯಥಾಪ್ರಕಾರ ಚಾಕ್ಷುಷ, ಶ್ರಾವಣ ಎಂದು ಮುಂತಾಗಿ ಲೆನ್ಸ್ ಮತ್ತು ಮಂತ್ ಆಫ್ ದಿ ಯಿಯರ್ ನಿಂದ ಆರಂಭಿಸಿ, ಪದ, ವಾಕ್ಯ ಇತ್ಯಾದಿಯಾಗಿ ಮುಂದುವರಿದಿರಲು ಎಲ್ಲಿಯ ಹೀರೋಯಿನ್?

ಕರ್ತೃ, ಕರ್ಮ, ಕ್ರಿಯೆ ಓಗೆಲ್ಲಾ ಬಡಬಡಿಸುತ್ತಾ ಅವರು 'ವ್ಯಾಸರು ಮಹಾ ಭಾರತವನ್ನು ಬರೆದರು' ಎಂಬ ಉದಾಹರಣೆ ಕೊಟ್ಟಿದ್ದಾರೆ. ಇದು ಆತ್ಮ ವಂಚನೆಯಲ್ಲದೆ ಇನ್ನೇನು ! ಸ್ವರಗಳು, ವ್ಯಂಜನಗಳು,

ಅಲ್ಪ, ಮಹಾಪ್ರಾಣಗಳು ಪ್ಲುತಗಳು, ಅನುಸ್ವಾರಗಳು............ಒಂದೇ ಎರಡೇ, oh my immortal Soul!

ಈ ವಂಚನೆಯ ಮುಸುಕನ್ನು ಅವರು ಬಹುಕಾಲ ಹಾಕಿಕೊಳ್ಳಲಾರರು ಎನ್ನುತ್ತಿದ್ದಂತೆ, ಅವರ ನಿಜವಾದ ಉದ್ದೇಶ ಎಂಟನೇ ಪುಟದ ಸಂಧಿ-ಪ್ರಕರಣದಲ್ಲಿ ಬಂತು.

ಹರಿಣ + ಅಕ್ಷಿ———→ಹರಿಣಾಕ್ಷಿ.

ಚಂಚಲ + ಅಕ್ಷಿ———→ಚಂಚಲಾಕ್ಷಿ,

ಈ ಸಂಧಿಗಳ ಹಿಂದೆ ಏನಾದರೂ ಅಡಗಿರಬೇಕು !

ಕಣ್ + ಪನಿ———→ಕಂಬನಿ

ಎಂಬ ವ್ಯಂಜನ ಸಂಧಿಯನ್ನು ಅವರು ಹತ್ತನೆಯ ಪುಟದಲ್ಲಿ ಉದಾಹರಿಸಿ ದ್ದಾರೆ. ಆದರೆ ಈ ಕಂಬನಿಯಾರದು ಎಂದು ನಾವು ಖಚಿತವಾಗಿ ಹೇಳುವಂತಿಲ್ಲ. ಕಂಬನಿ ಅಪಭ್ರಂಶ ನಾಗವರ್ಮನದೋ, ಹರಿಣಾಕ್ಷಿಯದೋ ತಿಳಿಯದೆ ಈ ನಾಟಕದ ವಿಮರ್ಶೆ ಅಸಾಧ್ಯ.

Ibid ಮೂವತ್ತೆರಡನೆಯ ಪುಟದಲ್ಲಿ ಅವರು ಕಾವೇರಿ, ಸಾವಿತ್ರಿ, ವಿಮಲ, ಲಲಿತಾ, ಜಾನಕಿ, ಗುಲಾಬಿ, ಶಕುಂತಲಾ, ಕಮಲ, ಎಂಬ ಹೆಸರುಗಳನ್ನು ಅಂಕಿತ ನಾಮಕ್ಕೆ ಉದಾಹರಣೆಯಾಗಿ ಕೊಟ್ಟಿರುತ್ತಾರೆ. ಕಾವೇರಿ ನದಿಯಿದ್ದೀತು, ಗುಲಾಬಿ, ಕಮಲ ಹೂಗಳಿದ್ದಾವು, ಸಾವಿತ್ರಿ, ಜಾನಕಿ, ಶಕುಂತಲೆಯರು ಪೌರಾಣಿಕ ವ್ಯಕ್ತಿಗಳಿರ ಬಹುದು, ವಿಮಲ ಎನ್ನುವುದು ಟೆಕ್ಸ್‌ಟೈಲ್ ಸ್ಟೋರ್ ಇರಬಹುದು ಎಂದು ಕೊಂಡು ಮುಂದುವರಿದೆ. ಆದರೆ ಕ್ರಿಯಾಪದ ಪ್ರಕರಣದಲ್ಲಿ ಕಮಲ ಓದುತ್ತಾಳೆ ಎಂಬ ಉದಾ. ಯನ್ನು ನೋಡಿ ಕುತೂಹಲ ಕೆರಳಿತು. ಇದಕ್ಕೆ ಎರಡು ಸಾಧ್ಯತೆಗಳಿವೆ. ಕಮಲ ಅವರ ಮಗಳಿರಬಹುದು. ಗ್ರಂಥವನ್ನು ಬರೆಯುವಾಗ ಆವಳು ಓದುತ್ತಿರ ಬಹುದು ಎಂದುಕೊಂಡರೂ ತೃಪ್ತಿಯಾಗಲಿಲ್ಲ ಅಪಭ್ರಂಶರಿಗೆ ಬಂದ ಕಾಗದವನ್ನು

ಅವರ ಪತ್ನಿ ಕಮಲ ಓದಿ ರಗಳೆ ಮಾಡಿರಬಹುದು ಎಂಬ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ, ಅಥವಾ ಅವರು ಅವಿವಾಹಿತರಾಗಿದ್ದರೆ, ತಮ್ಮ ಪ್ರೇಮವನ್ನು ವ್ಯಕ್ತಪಡಿಸಿ ಬರೆದ ಕತೆಯನ್ನು ಕಮಲ ಓದುತ್ತಾಳೆ (ಅವಳ ಕಲ್ಲೆದೆ ಕರಗುತ್ತದೆ, ಅವಳು ಪ್ರೇಮಾದ್ರ್ರ ಹೃದಯಳಾಗುತ್ತಾಳೆ) ಎಂಬ ಆಶೆಯೂ ವ್ಯಕ್ತವಾಗಿರ ಬಹುದು. ಈ ಚಿಂತೆಗೆ ಅರಿಸಮಾಸ ಪ್ರಕರಣದಲ್ಲಿ ನಿಷ್ಪೃಷ್ಟವಾದ ಉತ್ತರವಿದೆ.

ಮಂಗಳಾರತಿ ಎಂಬುದು ಅರಿಸಮಾಸವಾದುದರಿಂದ, ಅದು ಕಮಲ ಎತ್ತಿದ್ದೋ, ಅವಳ ಅಣ್ಣನೋ, ಅಪ್ಪನೋ ಎತ್ತಿದ್ದೋ ಎಂಬ ಸಂಶಯುಬಂತಂ. ಹೀಗಾಗಿ ಅಪಭ್ರಂಶರು ಭಗ್ನಪ್ರೇಮಿ ಎಂಬ ನಿರ್ಧಾರಕ್ಕೆ ಬರಬೇಕಾಯಿತು, ಅವಳೆಂಥ ಹಿರೋಯಿನ್ !

ಇವರ ನಾಟಕದ ಬಗೆಗೆ ಒಂದು ಬೀಜಮಾತು ತಿಳಿಯಲು ಅಪಭ್ರಂಶ ಪ್ರಕರಣವೇ ಸರಿಯಾದ ಜಾಗವೆಂದು ತಿಳಿದು ತದ್ಭವ ಪ್ರಕರಣವನ್ನು ಪರಿಶೀಲಿಸ ಲಾರಂಭಿಸಿದೆ.

ಅಲ್ಲಿ ಅಪಭ್ರಂಶರು, ಗೌರೀ—ಗೌರಿ, ವಿಮಾಲಾ—ವಿಮಲೆ, ಲಕ್ಷ್ಮೀ—ಲಕ್ಷ್ಮಿ, ಗಿರಿಜಾ—ಗಿರಿಜೆ ಇತ್ಯಾದಿಗಳನ್ನೆಲ್ಲಾ ಉದಾಹರಿಸಿದುದನ್ನು ನೋಡಿ, ಅವರು varied interests ಉಳ್ಳವರೆಂದು ನಿರ್ಧರಿಸಿದೆ. ಅಲ್ಲಿ ಅವರು ಕೊಟ್ಟ ಕೊನೆಯ ಉದಾಹರಣೆಯೆಂದರೆ ಸರಯೂ–ಸರಯು. ಪುಸ್ತಕದ ಕೊನೆಯ ಪುಟದಲ್ಲಿ ಅವರು ಕೊಟ್ಟ ಕೊನೆಯ ಉದಾಹರಣೆ ಹೀಗಿದೆ

ಅವಳೇ ನಾನು ಮೆಚ್ಚಿಯ ಚೆಲುವೆ. ಅವಳಿಗಿಂತ ಚೆಲವು ಇನ್ನಾರಿಗಿದೆ?

ಈಗ ಅಪಭ್ರಂಶ, ನಾಗವರ್ಮನ ಅಂತರಂಗದ ಪ್ರೇಮ ಪ್ರಕರಣದ ಹೀರೋ ಯಿನ್ ಯಾರೆಂದು ತಿಳಿಯಿತು. ತಿಳಿಯದುದೂ ಇದೆ. ವಿಭಕ್ತಿ ಪ್ರಕರಣದಲ್ಲಿಯೇ ಸರಯು, ಸರಯುವನ್ನು, ಸರಯುವಿನಿಂದ ಎಂದೇ ಅವರೇಕೆ ಹೇಳಲಿಲ್ಲ ಬಹುಶಃ ನಾಚಿಕೆ ಇರಬೇಕು.

****

ಗುಪ್ತ ಸಮಾಲೋಚನೆ

—ಅಶೋಕ್

---

೧. ನನ್ನ ಹೆಂಡತಿ ದಿನಾಗಲೂ ನನ್ನನ್ನು ಮೂದಲಿಸುತ್ತಾಳೆ. ಮನೆಗೆ ಹೋದರೆ ಸಾಕು ಬಯ್ಗುಳದ ಮಳೆ. ಅವಳು ಹೇಳಿದ್ದನ್ನೆಲ್ಲಾ ಮಾಡಿದರೂ, ಸಮಾಧಾನವೇ ಇಲ್ಲ. ಎಲ್ಲಾ ಹೆಂಡತಿಯರೂ ತಮ್ಮ ಗಂಡಂದಿರ ಸೇವೆ ಮಾಡಿಕೊಂಡು, ಅತ್ಯಂತ ವಿಧೇಯತೆಯಿಂದ ಇರುವಾಗ ಇವಳೊಬ್ಬಳಿಗೆ ಮಾತ್ರ ಏಕೆ ಈ ಚಾಳಿ ತಿಳಿಸುವಿರಾ ?

—ರಾಮಂಚಂದ್ರ ಶರ್ಮ–ನುಗ್ಗೇಹಳ್ಳಿ

ಉತ್ತರ ನಿಮ್ಮದು ನಿಜವಾದ ವಿಚಿತ್ರ ಸಮಸ್ಯೆ. ನಮ್ಮ ಮಾಹಿತಿ ಪ್ರಕಾರ ಶೇಕಡ 99.9 ಮನೆಗಳಲ್ಲಿ, ಹೆಂಡತಿಯರು, ಗಂಡ ಮನೆಗೆ ಬಂದ ತಕ್ಷಣ ಕೈಕಾಲು ತೊಳೆಯಲು ಬಿಸಿ ನೀರು ನೀಡಿ, ಬಿಸಿ ಬಿಸಿಯಾದ ಹಾಗೂ ರುಚಿಯಾದ ಊಟ ಬಡಿಸಿ, ಗಂಡನ ಮನಸ್ಸಿಗೆ ಸ್ವಲ್ಪವೂ ನೋವಾಗದಂತೆ ನೋಡಿಕೊಳ್ಳುತ್ತಾರೆ. ನಿಮ್ಮ ಹೆಂಡಿರದ್ದು ಚಂಡಿ ಜಾತಕ ಇರಬೇಕು. ಜ್ಯೋತಿಷಿಗಳನ್ನು ಕೇಳಿ.

೨. ನನಗೆ ಹತ್ತು ವರ್ಷ ವಯಸ್ಸು, ತೂಕ 60 ಕೆ.ಜಿ. ಸ್ಕೂಲಿನಲ್ಲೆಲ್ಲಾ ದೊಣ್ಣೆ ಅಂತ ರೇಗಿಸುತ್ತಾರೆ. ನನಗೆ ಅಳೂನೆ ಬಂದು ಬಿಡುತ್ತೆ. ನಾನು ಸಣ್ಣ ಆಗೋದು ಹೇಗೆ ?

—ಕೂಸು–ಕುಂದಾಪುರ

ಉತ್ತರ ನಿಮ್ಮಪ್ಪ, ಅಮ್ಮನ ಜಗಳ ಆಡಲು ಹೇಳಪ್ಪಾ ಮರಿ.

೩. ಮೊನ್ನೆ ನಾನು ಪೂನಾಕ್ಕೆ ಕೆಲಸದ ಮೇಲೆ ಹೋಗಿದ್ದು ನಿನ್ನೆ ಹಿಂತಿರುಗಿ ಬಂದೆ. ನನ್ನ ಮಿತ್ರ ಪ್ರಸಾದ್, ನಾನು ಮತ್ತು ನನ್ನ ಹೆಂಡ್ತಿನ ಮೊನ್ನೆ ರಾತ್ರೆ ಸೆಕೆಂಡ್‌ಷೋ ಸಿನಿಮಾದಲ್ಲಿ ನೋಡಿದ್ದನಂತೆ. ನಾನು ಊರಿನಲ್ಲೇ ಇರಲಿಲ್ಲವಲ್ಲೋ ಅಂತ ಎಷ್ಟು ಹೇಳಿದ್ರೂ ತಾನು ಖಂಡಿತ ನೋಡ್ದೆ ಅಂತ ಸಾಧಿಸ್ತಾನೆ. ಅವನ ಮೂರ್ಖತನಕ್ಕೆ ಏನು ಮಾಡಲಿ ?

—ಜಾನ್ ಕಕೂಡಲ್ಡ್–ಫ್ರೇಜರ್‌ಟೌನ್

ಉತ್ತರ : ನಂಬಿ ಕೆಟ್ಟವರಿಲ್ಲ ಗೋವಿಂದ ಅಂತ ಕೇಳಿಲ್ಲವೇ ? ಹೋಗ್ಲಿ ಮರೆತುಬಿಡಿ.

೪. ನನ್ನ ಗಂಡ ಬಹಳ ಮುಂಗೋಪಿ. ನಾನು ಸ್ವಲ್ಪ ತಪ್ಪು ಮಾಡಿದರೂ ಕೆಂಡ ಕಾರ್‍ತಾರೆ. ಅವರು ಮನೆಗೆ ಬರ್‍ತಾ ಇದ್ದಾಗಲೇ ನನಗೆ ನಡುಕ ಶುರುವಾಗುತ್ತೆ ನಾನು ಏನ್ಮಾಡಲೀ ?

—ಸಾವಿತ್ರಮ್ಮ-ಮೈಸೂರು

ಉತ್ತರ : ತಾಯೀ, ನಿಮ್ಮ ಯಜಮಾನರ ಹೆಸರು ವಿಳಾಸ ಕೊಡಿ. ತುರ್ತಾಗಿ ಅವರಿಂದ ಸಲಹೆ ಪಡೆಯಬೇಕಾಗಿದೆ.

5. ನನಗೆ ಬಡವರು ಅಂದರೆ ಮನಸ್ಸೆಲ್ಲಾ ಕರಗಿ ನೀರಾಗುತ್ತದೆ. ಅವರಿಗೆ ಏನಾದರೂ ಮಾಡಬೇಕು ಅನ್ನಿಸುತ್ತೆ. ಮೊನ್ನೆ ನೋಡಿ ನಮ್ಮ ಮನೆಗೆ ಒಬ್ಬ ಭಿಕ್ಷುಕಿ ಬಂದಿದ್ದಳು. ತೀರ ಬಡವಿ. ಬಟ್ಟೆ ಎಲ್ಲಾ ಚಿಂದಿ ಚಿಂದಿ ಆದರೆ ಒಳ್ಳೇ ಅಂಗ ಸೌಷ್ಠವ ಅವಳನ್ನು ನೋಡಿದ ಕೂಡಲೇ...........

ಜ*ರ್ಧ*ಪೂ*ರಿ–ನ*ದೆ*ಲಿ.

ಉತ್ತರ ; ಸರಿ, ಸರಿ, ಅರ್ಥವಾಯಿತು. ಮೊದಲು ಸಾಲ ಮೇಳ ನಿಲ್ಲಿಸಿ. ಎಲ್ಲಾ ಸರಿ ಹೋಗುತ್ತೆ.

೬. ನಾನು ನಮ್ಮ ಪಕ್ಕದ ಮನೆ ಹುಡುಗೀನ ಪ್ರೀತಿಸ್ತೇನೆ. ಅವಳು ಮಾತ್ರ ನನ್ನನ್ನ ತಿರುಗಿಯೂ ನೋಡಲ್ಲ. ಮೊನ್ನೆ ಕಾಲೇಜ್ ಹತ್ರ ಹೋಗ್ತಾ ಇದ್ದಾಗ ಅವಳ ಜೊತೆ ಇನ್ನಿಬ್ಬರು ಸ್ನೇಹಿತೇರಿದ್ರು. ಅವ್ರೂ ಚೆನ್ನಾಗಿದ್ರೂ ಇವ್ಳ ಮುಂದೆ ಅವ್ರೇನಿಲ್ಲಾ ಬಿಡಿ. ಬಸ್ಸಿಗೆ ಕಾಯ್ತಾ ಇದ್ರೂ ಅಂತ ಕಾಣುತ್ತೆ; ಬಸ್ ಸ್ಟಾಪಿನಲ್ಲೇ ನಿಂತಿದ್ರು. ಬಸ್ಸು ನೋಡಿ ಸದ್ಯ ಎಷ್ಟು ಹೊತ್ತಾದರೂ ಬರಲೇ ಇಲ್ಲ. ನಾನೂ ಸಹ ....

Boreರಣ್ಣ–ಮಲ್ಲೇಶ್ವರ

ಉತ್ತರ ತಮ್ಮ ಪ್ರಶ್ನೆ ಏನು ತಿಳಿಸುವಿರಾ ?

೭. ನಿಮ್ಮ ಉತ್ತರಗಳಲ್ಲಿ ಉಪ್ಪಿಲ್ಲ ಹುಳಿಯಿಲ್ಲ ಗುಪ್ತ ಸಮಾಲೋಚನೆ ಅಂತ ಏಕೆ ಹೆಸರಿಟ್ರಿ ರಾಯ್ರೆ ?

ಮನ್ಮಥರಾಜ್-ವಸಂತನಗರ

ಉತ್ತರ ಇಷ್ಟೂ ತಿಳಿಯದೇ ? ಹಾಗೆ ಹೆಸರಿಡದಿದ್ರೆ ನೀವು ಇಲ್ಲಿ ವರ್ಗೂ ಓದುತ್ತಿದ್ರೇನ್ರೀ ? ○

24

ಪ್ರಾಣಿ ಪ್ರಿಯರು

—ಲೀಲಾ ಮಿರ್ಲೆ

ನಮ್ಮ ಪಕ್ಕದಲ್ಲಿರೊ ಮಿ. ಮೆಹರಾ ಅವರ ಮನೇಲಿ ಕರುವಿನ ಎತ್ತರದ 'ಗ್ರೇಟ್‌ಡೇನ್' ನಾಯಿ ಇದೆ. ಮೊನ್ನೆ ಬೆಳಗ್ಗೆ ಹತ್ತು ಗಂಟೆ ಸಮಯದಲ್ಲಿ ಅವರ ಮನೆ ಕಡೆಯಿಂದ 'ಹೋ' ಅಂತ ಯಾರೊ ಕಿರುಚಿದ ಧ್ವನಿ ಕೇಳಿಸಿತು. ಕಾಂಪೌಂಡ್ ಹತ್ತಿರ ಹೋಗಿ ನೋಡಿದೆ. ತುಂಡು ಪಂಚೆ ಉಟ್ಟು, ನರೆತ ಕೂದಲಿನ ಮುದುಕನೊಬ್ಬನ ಹೆಗಲಿನ ಮೇಲೆ ಮೆಹರಾ ಅವರ ನಾಯಿ, ತನ್ನ ಮುಂಗಾಲುಗಳನ್ನು ಹಾಕಿ ಒಂಥರ 'ಬಾಲಾರೂಂ ಡ್ಯಾನ್ಸ್' ಮಾಡ್ತಿತ್ತು. ಮನೆಯಾಕೆ ಓಡಿ ಹೋಗಿ ನಾಯಿಯನ್ನು ಎಳೆದುಕೊಳ್ಳುವ ಬದಲು 'ಓ ಜಿಮ್ಮಿ ಬೇಟಾ, ನೀಚೆ ಉತ್ರೊ ತುಮ್‌ಹೇ ಪತಾನಹಿ ಕಿ ಏ ನಯಾ ಮಾಲಿ ಹೈ' (ಜಿಮ್ಮಿ ಕೆಳಗಿಳಿ, ಅವನು ಹೊಸ ಮಾಲಿ ಅಂತ ನಿಂಗೆ ಗೊತ್ತಿಲ್ವೆ) ಅಂತ ನಿಧಾನವಾಗಿ ಆರಗಿಣಿಗೆ ಹೇಳೊಹಾಗೆ ಆದಕ್ಕೆ ತಿಳುವಳಿಕೆ ಹೇಳುತ್ತಿದ್ದಳು. ಅಪಾರವಾದ ಪ್ರಾಣಿ ದಯೆಯನ್ನು ಹೊಂದಿ, ಈ ತರಹ ನಾಯಿ ನರಿಗಳನ್ನ ಸಾಕುವವರು, ಮನುಷ್ಯನೆಂಬ ಬಡಪ್ರಾಣಿಯ ಮೇಲೂ ಕೊಂಚ ಕರುಣೆ ಇಡಬಾರದೇ ?

ಭೂಲೋಕದ ನಾನಾ ತರಹದ ಜನರಲ್ಲಿ ಈ ಪ್ರಾಣಿ ಪ್ರಿಯರದೇ ಒಂದು ಗುಂಪು. ಈ ಗುಂಪಿನವರ ವೈಶಿಷ್ಟ್ಯವೇನೆಂದರೆ, ಸ್ತ್ರೀಯರು ಹೆಚ್ಚೊ, ಪುರುಷರು ಉತ್ತಮರೊ, ಅಥವ ಅವರಿಬ್ಬರೂ ಸಮಾನರೊ ಎಂಬ ಚರ್ಚೆಯ ಗೊಡವೆಗೆ ಇವರುಗಳು ಹೋಗುವುದಿಲ್ಲ. ಏಕೆಂದರೆ ಅವರುಗಳ ಪ್ರಕಾರ ಮನುಷ್ಯರಿಗಿಂತ ಪ್ರಾಣಿಗಳೇ ಉತ್ತಮ ! ಹಾಗಾಗಿ ಅವರು ಸಾಕಿರುವ ಪ್ರಾಣಿಗಳನ್ನು ಪ್ರಾಣಿಗಳೆಂದು ಪರಿಗಣಿಸುವುದಿಲ್ಲ. ಅವರ ಭಾಗಕ್ಕೆ ಅದು ಮನೆಯ ಒಬ್ಬ ಸದಸ್ಯನಂತೆ !

ಸಾಮಾನ್ಯವಾಗಿ ನಾರ್ಮಲ್ ಮನುಷ್ಯರಿಗೆ ಈ ಶ್ವಾನಪ್ರಿಯರ ಸಹವಾಸ ಸರಿಬೀಳುವುದಿಲ್ಲ. ಕಾರಣ ಅವರುಗಳ ಮನೆಗೆ ಹೋದರೆ, ಬಂದವರಿಗೆ ಬೇಕೊ ಬೇಡವೋ, ನಾಯಿಯ ಕೈಯಲ್ಲಿ 'Shake hands' ಮಾಡಿಸುವುದು 'out' ಎಂದರೆ ಅದು ಆಚೆಗೆ ಹೋಗುವುದು 'Come in' ಎಂದರೆ ಅದು ಒಳಗೆ ಬರುವುದು 'Sit' ಎಂದರೆ ಕೂರೂವುದು, ಇತ್ಯಾದಿಗಳನ್ನು ನೋಡಬೇಕು. ಅಷ್ಟೇ ಅಲ್ಲಾ, ಮನೆ ಒಡತಿ

ಅದನ್ನ ಹತ್ತಿರ ಕರೆದು ಕೂರಿಸಿಕೊಳ್ಳೋದು ಬೇರೆ. ಆ ಹಿಗ್ಗಿದ ಶ್ವಾನ ಟಪಟಪ ಅಂತ ಅದರ ಉದ್ದಾನೆ ಬಾಲವನ್ನ ಬೀಸಿದಾಗ, ಬಾಲದ ತುದಿ ಅತಿಥಿಯ ಕಣ್ಣಿಗೊ ಬಾಯಿಗೊ ಬಡಿದಾಗ, ಬಂದವರ ಪಾಡು ನಾಯಿಪಾಡು !

ಈ ನಾಯಿಪ್ರೇಮಿಗಳು ಮಾಡುವ ಒಂದೇ ಒಂದು ಒಳ್ಳೆಯ ಕೆಲಸವೆಂದರೆ, ಮನೆಯ ಗೇಟಿನ ಮೇಲೆ 'ನಾಯಿಗಳಿವೆ ಎಚ್ಚರಿಕೆ' ಎಂದು ಬರೆಯುವುದು. ಇದ ರಿಂದ ನಾವು, ಈ ಮನೆಯಲ್ಲಿ ನಾಯಿ, ಅದರ ಒಲವಿನ ಒಡೆಯ, ಒಡತಿ ಇದಾರೆ, ದಾರಿ ತಪ್ಪಿ ಒಳಗೆ ಹೋದರೆ ನಾಯಿಯ ಪ್ರಶಂಸೆ ಕೇಳಬೇಕಾದೀತು ಎಂಬ ಎಚ್ಚರಿಕೆ ಯನ್ನ ಈ ಬೋರ್ಡು ಕೊಡುತ್ತೆ.

ನಾಯಿಯ ಆಟವೆಲ್ಲಾ ಅದರ ಮನೆಯಲ್ಲೆ ಆದರೆ, ಬೆಕ್ಕಿನ ಕಥೆಯೇ ಬೇರೆ. ನಮ್ಮ ಶ್ಯಾಮಲಾ ಮಾರ್ಜಾಲ ಮಿತ್ರೆ, ಅವಳ ಮನೆ ಬೆಕ್ಕು ಕೊಂಚ ಕೋಣನ ಹಾಗಿದೆ. ಆದರೂ ಶ್ಯಾಮಲಳಿಗೆ ಸದಾ ಒಂದೇ ಚಿಂತೆ ; 'ನಂ ಪುಸ್ಸೀ ಹಾಲೇ ಕುಡಿಯಲ್ಲಾ' ಅಂತ ಶ್ಯಾಮಲಾ ಹೀಗೆ ವೇಚಾಡಿಕೊಂಡಾಗೆಲ್ಲಾ ಅವಳ ಪಕ್ಕದ ಮನೆ ಅರುಣಳಿಗೆ ಸಿಟ್ಟು ನೆತ್ತಿಗೆ ಏರುತ್ತದೆ. "ಆ ಧಡಿಯಾ ಬೆಕ್ಕು ದಿನಾ ನಮ್ಮನೇಲಿ ಪಾತ್ರೆಲಿದ್ದ ಹಾಲನ್ನೆಲ್ಲಾ ಕದ್ದು ಕುಡಿದು ಓಡಿಹೋಗುತ್ತೆ. ಮತ್ ಹ್ಯಾಗ್ ಅದಕ್ಕೆ ಹಾಲು ಸೇರುತ್ತೆ" ಅಂತ ಅವಳ ಫಿರ್ಯಾದು !

ನೀನಳ ಪಂಚ ಪ್ರಾಣಗಳೂ ಅವಳ ಗಿಣಿಯಲ್ಲಿ ಇವೆ ಎಂದರೆ ತಪ್ಪಾಗಲಾರದು ನೀನಾ ಪಕ್ಷಿ ಪ್ರೇಮಿ. ಬಾಡಿಗೆ ಮನೆ ಹುಡುಕುವಾಗಲೂ, ಪಂಜರಗಳನ್ನು ನೇತು ಹಾಕಲು ಸರಿಯಾದ ಸ್ಥಳವಿದೆಯೇ ಅಂತ ನೋಡಿಯೇ ಮನೇನ ಬಾಡಿಗೆಗೆ ತೆಗೆದು ಕೊಳ್ಳುವ ರೂಢಿ. ಒಂದಿನ ಅವಳ ಮನೆಗೆ ಹೋಗಿದ್ದೆ. ಅವಳ ಜೊತೆ ಮಾತಾಡ್ತಾ ಈಚೆಗೆ ನೀರಿನ ತಾಪತ್ರಯ ಕಮ್ಮಿಯಾಗಿದೆ ಎಂದೆ. ಹಿಂದಿನಿಂದ ಯಾರೊ ಕೀರಲು ಧ್ವನಿಯಲ್ಲಿ 'Shut up' ಎಂದ್ರು. ನನಗೆ ಮುಖ ಮುರಿದ ಹಾಗಾಯ್ತು. ಹಿಂದೆ ತಿರುಗಿ ನೋಡಿದೆ. ಪಂಜರದಲ್ಲಿನ ಗಿಣಿಯ ಆದೇಶ ಅದಾಗಿತ್ತು. ಅವಳು ಮಾತಾ ಡಿದರೆ ಸುಮ್ಮನಿರುತ್ತಿತ್ತು. ನಾನು ಬಾಯಿ ತೆರೆದರ 'Shut up' ಎನ್ನುತ್ತಿತ್ತು. ಎರಡು ಸಲ 'Shut up' ಎಂದರೆ, ಒಂದು ಸಲ 'Fool' ಎನ್ನುತ್ತಿತ್ತು. ಅದರ ಅನಿಸಿಕೆಯಲ್ಲಿ ನಿಜವಿದ್ದಿರಬಹುದು. ಆದರೆ ನನಗ್ಯಾಕೊ ತುಂಬಾ ಮುಜುಗರ ವಾಯ್ತು.

'ಏನ್ಮಾಡೋದು, ನಂ ಮಹೇಶು ಎಲ್ಲಾ ತಪ್ಪು ಟ್ರೈನಿಂಗ್ ಕೊಟ್ಟು ಬಿಟ್ಟಿ ದ್ದಾನೆ. ಮನೆಗೆ ಬಂದವರು ಮಾತಾಡಕ್ಕೆ ಶುರು ಮಾಡಿದ್ರೆ ಸಾಕು, ಅದು ಹಾಗ

ನ್ನಲು ಶುರು ಮಾಡುತ್ತೆ ಅಂತ ನಗುತ್ತಾ ಹೇಳಿದಳು ನೀನಾ.

ಅಲ್ಲಾ, ಮನೆಗೆ ಯಾರಾದ್ರು ಬಂದಾಗಲಾದ್ರೂ ಗಿಣಿ ಪಂಜರಾನ ಬೇರೆ ಕಡೆ ಇಡಬಾರದೆ ಮಹರಾಯ್ತಿ ! ಆ ಶುಕದ ವ್ಯಾಮೋಹದಲ್ಲಿ ಅದು ಅವಳಿಗೆ ತಿಳಿದ ಹಾಗೆ ಕಾಣಲಿಲ್ಲ !

ಕುಸುಮಳ ಮನೆಯಲ್ಲಿ ನಡೆದದ್ದನ್ನ ಹೇಳೋದೆ ಮರೆತೆ. ಒಮ್ಮೆ ಅವರ ಮನೆ ಡ್ರಾಯಿಂಗ್ ರೂಮಿನಲ್ಲಿ ಕೂತಿದ್ದೆ. ಕುಸುಮ ಕಾಫಿ ತರಕ್ಕೆ ಒಳಗೆ ಹೋಗಿದ್ದಳು. ಬೆತ್ತದ ಕುರ್ಚಿಯ ಕೆಳಗೆ ರಬ್ಬರಿನ ಹಸಿರು ಹಾವೊಂದು ಕಾಣಿಸಿತು. ಈ ರಬ್ಬರ್ reptile ಗಳ ಪರಿಚಯ ನನಗೆ ಚೆನ್ನಾಗಿದೆ. ಹೇಗೇಂತಿರಾ ? ನಾನು ಶಾಲಾ ಉಪಾಧ್ಯಾಯಿನಿ. ಹಾಗಾಗಿ ಎಷ್ಟೋ ಸಲ ನನ್ನ ಕುರ್ಚಿಯ ಮೇಲೆ ಹಲ್ಲಿಯೋ, ಹಾವು ರಾಣಿಯೋ ಕೂತಿರುತ್ತದೆ. ಮೊದ ಮೊದಲು ಹೆದರಿ ಚೀರುತ್ತಿದ್ದೆ ನಾನು ಚೀರುವುದನ್ನು ನೋಡಲು ಅವತಿಕೊಂಡು ಕೂತಿದ್ದ ತುಂಟರು ನಗುತ್ತಾ ಆಚೆ ಬರುತ್ತಿದ್ದರು. ಈಗ ರಬ್ಬರ್ ಏಡಿ, ಚೇಳು ಇವೆಲ್ಲಾ ನನಗೆ ಚೆನ್ನಾಗಿ ಪರಿಚಯ. ಹಾಗಾಗಿ ಕುರ್ಚಿಯ ಕೆಳಗಿದ್ದ ಹಾವನ್ನು ನಾನು ಅಷ್ಟಾಗಿ ಸೀರಿಯಸ್ಸಾಗಿ ತೆಗೆದುಕೊಳ್ಳಲಿಲ್ಲ. ಕುಸುಮ ಕಾಫಿ ತೆಗೆದುಕೊಂಡು ಬಂದ್ಲು ಹಾವೂ ನನ್ನ ಕಡೆಗೆ ಸರಸರನೆ ಬಂತು. ಮನೆ ಹಾರುವ ಹಾಗೆ ಚೀರಿದೆ. ಅಯ್ಯೋ ಹೆದರ ಬೇಡ. ಅದನ್ನ 'Pet' ಆಗಿ ಸಾಕಿದೀವಿ. ಅದೇನು ಮಾಡಲ್ಲ 'harmlessu' ಅಂತ ಹೇಳ್ತಾ ಅದನ್ನ ಪ್ರೀತಿಯಿಂದ ಎತ್ತಿಕೊಂಡಳು ಕುಸುಮ. ಮಂಗೇಶರಾಯರ ಪದ್ಯವನ್ನ ಅದಲು ಬದಲು ಮಾಡಿ, "ಎಲೆ ನಾಗಣ್ಣ, ಪೋಗುವೆನಣ್ಣಾ" ಎಂದು ಹೇಳಿ ಬೇಗ ಹೊರಬಿದ್ದೆ.

ಪ್ರಾಣಿಗಳನ್ನು ಸಾಕುವವರಿಗೆ ಅದರ ಮೇಲಿನ ಮಮತೆ ಹೃದಯಾಂತರಾಳದಿಂದ ಬಂದಿರುತ್ತೆ ಎನ್ನುವುದು ಬೀದರಿಗೆ ಹೋದಾಗ ನನಗೆ ಅರಿವಾಯ್ತು.

ಬೀದರಿನಲ್ಲಿ ನನ್ನ ಸ್ನೇಹಿತೆ ಮೀರಾ ಇದಾಳೆ. ಅವಳ ಮನೆಯಲ್ಲಿ ಇರೋದು ಅವಳ ನಾಯಿ, ಅವಳ ಇಬ್ಬರು ಮಕ್ಕಳು, ಅವಳು ಮತ್ತು ಅವಳ ಗಂಡ. ನಾನು ಅಲ್ಲಿದ್ದಾಗ ನಾಯಿ 'ಪಿಲ್ಟು'ಗೆ ಜ್ವರ ಬಂತು. ಬೆಳಗಿನಿಂದ ಏನೂ ತಿನ್ನದೆ, ಕುಡಿಯದೆ ಮಂಕಾಗಿ ಮೂಲೇಲಿ ಮುದುಡಿಕೊಂಡಿತು. ಪಿಲ್ಟು ನಿಲ್ಲಲು ಹೋದರೆ ಕಾಲು ಕುಸಿಯುತ್ತಿತ್ತು. ಮೀರಾ ತನಗೆ ತಿಳಿದ ಔಷಧಿಗಳನ್ನೆಲ್ಲಾ ಕೊಟ್ಟಳು. ಹತ್ತಿರ ವೆಟರ್ನರಿ ಡಾಕ್ಟರು ಇಲ್ಲದ್ದರಿಂದ ಅವಳ ಆತಂಕ ಮತ್ತಷ್ಟು ಹೆಚ್ಚಿತು. ಸಂಜೆ ಹೊತ್ತಿಗೆ ಪಿಲ್ಟು ತೀರಾ ಸುಸ್ತಾಗಿ ಕಣ್ಣನ್ನ ಮೇಲಕ್ಕೆ ಎಳೆಯುತ್ತಾ, ಭಾರ

ವಾಗಿ ಉಸಿರಾಡಲು ಶುರು ಮಾಡಿತು. "ದೇವರೇ. ಪಿಲ್ಟುನ ಕಾಪಾಡಪ್ಪ, ಬೇಗ ಆದಕ್ಕೆ ಹುಷಾರಾಗಲಿ. ಹುಷಾರಾದ್ರೆ ನಿಂಗೆ ಕುಂಕುಮಾರ್ಚನೆ ಮಾಡಿಸ್ತೀನಿ" ಅಂತ ಹರಕೆ ಹೊತ್ತಳು ಮೀರಾ ದೇವರ ಮಹಿಮೆ, ಪಿಲ್ಟು ನಿಧಾನವಾಗಿ ಓಡಾಡಲು ಶುರು ಮಾಡ್ತು, ಕೊಂಚ ಹಾಲನ್ನೂ ಕುಡೀತು: ಮೀರಳಿಗೆ ಜೀವ ಬಂದ ಹಾಗಾಯ್ತು.

ಮೂರನೆಯದಿನ ಗಂಡ ಹೆಂಡತಿ ನನಗೆ ಊರು ತೋರಿಸಲು ಕರೆದುಕೊಂಡು ಹೋದ್ರು. "ನೋಡಿ ಮೊದಲು ದೇವಸ್ಥಾನಕ್ಕೆ ಹೋಗಿ ಆಮೇಲೆ ಮಿಕ್ಕ ಕಡೆಗಳಿಗೆ ಹೋಗೋಣ" ಎಂದಳು ನನ್ನ ಗೆಳತಿ. ಅಂತೆಯೇ ಹಣ್ಣು ಕಾಯಿ ತೆಗೆದುಕೊಂಡು ದೇವಸ್ಥಾನಕ್ಕೆ ಹೋದೆವು. ಅರ್ಚಕರು "ಏನಮ್ಮ ಹಣ್ಣುಕಾಯಿ ಮಾಡಿಕೊಡ್ಲೆ, ಅಥವ ಕುಂಕುಮಾರ್ಚನೆಯೋ" ಅಂದ್ರು. "ಕುಂಕುಮಾರ್ಚನೆ ಮಾಡಿ" ಎಂದಳು ಮೀರಾ. ಅರ್ಚಕರ ಮರುಪ್ರಶ್ನೆ "ಹೆಸರು, ನಕ್ಷತ್ರ, ಗೋತ್ರ, ಏನು" ಅಂತ.

ಮೀರಾ ತಬ್ಬಿಬಾದಳು. ತಡವರಿಸುತ್ತಾ 'ಮುದ್ದಿಗೆ ಪಿಲ್ಟು ಅಂತೀವಿ, ಆ ಹೆಸರಿನಲ್ಲೇ ಮಾಡಿಸಿ, ಎಂದಳು. 'ಸರಿ ತಾಯಿ, ನಕ್ಷತ್ರ ಗೋತ್ರ ಹೇಳಿ— ಭಟ್ಟರ ಮಿಲಿಯನ್ ಡಾಲರ್ ಪ್ರಶ್ನೆ. ಮೀರಾ ಪಿಸು ಮಾತಿನಲ್ಲಿ ಗಂಡನಿಗೆ 'ನಮ್ಮ ಗೋತ್ರಾನೇ ಹೇಳಲೇ' ಎಂದ್ಲು 'ಏನಾದ್ರೂ ಹೇಳು, ಆದ್ರೆ ನನ್ನ ನಕ್ಷತ್ರ ಹೇಳ ಬೇಡ ನಿಂದ್ ಬೇಕಾದ್ರೆ ಹೇಳು' ಅಂದ ಆತ. ಅಂತೂ ಪಿಲ್ಟುವಿನ ಹೆಸರಿನಲ್ಲಿ ಕುಂಕು ಮಾರ್ಚನೆ ಆಯಿತು. ಪರಮಾತ್ಮಾ ಎಲ್ಲಾ ಜೀವಿಗಳಲ್ಲೂ ಇದಾನೆ ಅಂದ ಮೇಲೆ ಮೂಕ ಪ್ರಾಣಿಯ ಹೆಸರಿನಲ್ಲಿ ಕುಂಕುಮಾರ್ಚನೆ ಮಾಡಿದರೆ ತಪ್ಪೇನೂ ಕಾಣದು: ಆದರೆ ಭಟ್ಟರಿಗೆ ತಿಳಿದಿದ್ದರೆ ಸ್ವಲ್ಪ ಆಭಾಸವೇ ಆಗ್ತಿತ್ತೇನೊ ಅಲ್ವೆ ?

ಅಪಾರ್ಥ ಕೋಶ

Bus ಮಾಸುರ	:	ಬಿ.ಟಿ.ಎಸ್. ಚಾಲಕ
Chin ತಾಮಗ್ನ		ಆಲೋಚನಾ ಕ್ರಾಂತ
Some ಪಾದನೆ		ಏನೋ ಒಂದಿಷ್ಟು ಗಿಟ್ಟಿಸುವುದು
Son ಮಾನ		ಮಂತ್ರಿಗಳ ಮಗನಿಗೆ ಸಿಗುವ ಆದರ

—Anaನ್‌ದ್

“ಪ್ರಸವ ವೇದನೆ”

—ಕಿಟ್ಟು

ತನ್ನ ಹೆಂಡತಿಗೆ ಹೆರಿಗೆ ಭತ್ಯೆ ಸಿಕ್ಕುತ್ತದೆ ಎಂದು, ಯಾರಿಂದಲೋ ತಿಳಿದ ವೆಂಕ ಅದನ್ನು ಪಡೆಯುಲು ಹೆಂಗಸರ ಹೆರಿಗೆ (?) ಆಸ್ಪತ್ರೆಗೆ ಧಾವಿಸಿದ. ಅಲ್ಲಿ ಕುಳಿತಿದ್ದ ಲೇಡಿ ಮೆಡಿಕಲ್ ಆಫೀಸರ್ ಇವನ ಹೊಟ್ಟೆಯನ್ನು ಮೊದಲು ನೋಡಿ, ನಂತರ ಮುಖನೋಡಿ ಹುಬ್ಬೇರಿಸಿದರು

“ಹೆರಿಗೆ ಭತ್ಯೆ ಸಿಗುತ್ತಂತಲ್ಲಾ—— ವೆಂಕ ತೊದಲಿದ

“ನಿನಗೆ ಸಿಗೋಲ್ಲ”

“ನನಗಲ್ಲ. ನನ್ಹೆಂಡ್ತಿಗೆ, ಅವ್ಮಾವ್ರೇ”

“ಎಷ್ಟು ತಿಂಗಳು ?’

“ಏಳು ತಿಂಗಳು.

“ಮದುವೆಯಾಗಿ ಎಷ್ಟು ಸಮಯ ಆಯ್ತು?”

“ಆರು ತಿಂಗಳು,

ಎಲ್. ಎಮ್. ಓ ಹುಬ್ಬು ಮತ್ತೆ ಮೇಲೇರಿತು.

“ಏನ್ಮಾಡೋದು? ಮೊದಲನೇ ಮಗೂಗಿಂತ ಇದೆಷ್ಟೋವಾಸಿ. ಮದುವೆ ಯಾದ ಮೇಲೆ ಹುಟ್ತಾ ಇದೆ.” ವೆಂಕ ವಿವರಣೆ ನೀಡಿದ.

ಎಲ್ಲೆಮ್ಮೋ ಕರ್ಚೀಫ್ ತೆಗೆದು ಮುಖ ಒರೆಸಿಕೊಂಡು ಮತ್ತೆ ಫ್ರೆಶ್ ಆಗಿ ಪೌಡರ್ ಲೇಪಿಸಿಕೊಂಡರು. ಈ ಎಡವಟ್ಟು ಆಸಾಮಿಯನ್ನು ಸಾಗಹಾಕುವ ಉದ್ದೇಶದಿಂದ, ಬೇಗಬೇಗ ಅವನಿಗೆ ಒದಗಿಸಬೇಕಾದ ದಾಖಲೆಗಳನ್ನು ಕುರಿತು

ಹೇಳಿದರು. "ನೋಡು, ಮೊದಲು ನಿಮ್ಮ ಏರಿಯಾದ ಲೇಡಿ ಹೆಲ್ತ್ ವರ್ಕರ್‌ನಿಂದ, ನಿನ್ನ ಹೆಂಡತಿ ಗರ್ಭಿಣಿ ಎಂಬ ಸರ್ಟಿಫಿಕೇಟ್ ಮಾಡಿಸು. ನಂತರ ಗ್ರಾಮ ಸೇವಕರಿಂದ ಜಮೀನು ಇರುವುದಿಲ್ಲ ಎಂಬ ಧೃಡೀಕರಣ ಪತ್ರ ತೆಗೆದುಕೋ. ಎಂಟನೇ ತಿಂಗಳಿಗೆ ಅಪ್ಲಿಕೇಶನ್ ಜೊತೆ ಇವಿಷ್ಟು ತಂದುಕೊಡು, ಮುನ್ನೂರು ರೂಪಾಯಿ ಸಿಗುತ್ತದೆ" ಎಂದರು.

ಅತ್ಯಾನಂದದಿಂದ ಅವರಿಗೆ ನಮಸ್ಕರಿಸಿ ಹೊರಬಿದ್ದ ವೆಂಕ. ಮೊದಲನೇ ಮಗು ಕೈ ಕೊಟ್ಟು ಬಿಟ್ಟಿತು. ಇಲ್ಲದಿದ್ದರೆ ಎರಡು ಬಾರಿ ಭತ್ಯೆ ಪಡೆಯಬಹುದಿತ್ತು ಎಂದು ತನ್ನ ಆತುರಕ್ಕೆ ತನ್ನನ್ನೇ ನಿಂದಿಸಿಕೊಂಡ ವೆಂಕ.

ಸರಿ ಮೊದಲಿಗೆ ಲೇಡಿ ಹೆಲ್ತ್‌ವರ್ಕರ್ ಅನ್ನು ಹುಡುಕಬೇಕು. ತಮ್ಮ ಏರಿಯಾಕ್ಕೆ ಅಂಥವರೊಬ್ಬರಿದ್ದಾರೆ ಎನ್ನುವ ವಿಚಾರ ಗೊತ್ತಾದುದೇ ಇವತ್ತು ವೆಂಕನಿಗೆ. ಆಸ್ಪತ್ರೆಯ ಹಿಂಬಾಗದಲ್ಲೇ ಆಫೀಸಿತ್ತು. ಅಲ್ಲಿ ಬಿಳಿಯುಡುಗೆ ತೊಟ್ಟ ಕೆಲವು ಮಹಿಳಾ ಮಣಿಗಳು ಗುಂಪಾಗಿ ನಿಂತಿದ್ದರು. ಇವರೇ LHW ಗಳು ಎಂದು ಅಭಿಪ್ರಾಯಕ್ಕೆ ಬಂದ ವೆಂಕ. ಈಗ ತಮ್ಮ ಏರಿಯಾಗೆ ಸಂಬಂಧ ಪಟ್ಟವರು ಇವರಲ್ಲಿ ಯಾರು? ಯಾರೊಬ್ಬರನ್ನು ತಮ್ಮ ಏರಿಯಾದಲ್ಲಿ ನೋಡಿದ ನೆನಪಿಲ್ಲ ವೆಂಕನಿಗೆ. ಹಾಗೆಲ್ಲಾ ನೋಡಿದ ಮಹಿಳೆಯರನ್ನು ಥಕ್ಕನೆ ಮರೆಯುವವನೂ ಅಲ್ಲ ವೆಂಕ. ಅಲ್ಲೆ ಕಟ್ಟೆಯ ಮೇಲೊಬ್ಬ ಪ್ಯೂನ್ ಬೀಡಿ ಎಳೆಯುತ್ತಾ ಕುಳಿತಿದ್ದ. ಅವನ ಬಳಿ ಹೋಗಿ ತಮ್ಮ ಏರಿಯಾಕ್ಕೆ ಸಂಬಂಧಪಟ್ಟ LHW ಯಾರು ಎಂಬುದನ್ನು ತಿಳಿದುಕೊಂಡು ಸೀದಾ ಅವಳ ಬಳಿ ಹೋದ. "ಸ್ವಲ್ಪ ನಮ್ಮ ಮನೆಗೆ ಬನ್ನಿ" ಎಂದ. ಆಕೆ ಕೆಂಗಣ್ಣು ಬೀರಿದಳು. ತನ್ನ ತಪ್ಪು ತಿಳಿದು ಕೊಂಡ ವೆಂಕ ಕೂಡಲೇ ನುಡಿದ "ನನ್ಹೆಂಡ್ತೀಗೆ ಹೆರಿಗೆ ಭತ್ಯೆ ಕೊಡಿಸಬೇಕಿತ್ತು"

"ಏನು ಕೆಲಸ?" LHW ಕೇಳಿದಳು.

"ಕಳೆದ ಜಾನುವಾರುಗಳನ್ನು ಹುಡುಕಿಕೊಂಡು ಬರೋದು" ವೆಂಕ ನುಡಿದ

"ನಿಂದಲ್ಲವೋ ನಿನ್ಹೆಂಡ್ತಿ ಏನ್ಕೆಲ್ಸ ಮಾಡ್ತಾಳೆ?"

"ಜಾನುವಾರುಗಳನ್ನು ಕೊಟ್ಟಿಗೆಯಿಂದ ಬಿಚ್ಕೊಂಡು ಬರೋದು"

"ಸರಿ, ನಾಳೆ ಬರ್ತೇನೆ. ಅಲ್ಲೇ ನೋಡಿ ಸರ್ಟಿಫಿಕೇಟ್ ಕೊಡ್ತೇನೆ" ಎಂದು ಹೇಳಿ ಆತನ ವಿಳಾಸ ನೋಟ್ ಮಾಡಿಕೊಂಡಳು.

ನಾಳೆ ಎಂದವಳು ನಾಲ್ಕು ದಿನ ತಡೆದು ಬಂದಳು. ನಾಲ್ಕು ದಿನವೂ ವೆಂಕ ಕೆಲಸ ಬಿಟ್ಟು ಕಾಯುತ್ತಾ ಕುಳಿತಿದ್ದ. ಒಳಗಿದ್ದ ಹೆಂಡತಿಯನ್ನು ಪರೀಕ್ಷೆ ಮಾಡಿ, ಹೊರ ಬಂದು ವೆಂಕನ ಹತ್ತಿರ "ಹತ್ತು ರೂ. ತೆಗಿ" ಎಂದಳು. ಹತ್ತು ರೂಪಾಯಿ ಇದಿದ್ರೆ ಈಗ ಮನೆಯಲ್ಲಿ ಬೇವರ್ಸಿ ತರ ಯಾಕೆ ಕುಂತಿರ್ತಿದ್ದೆ. ಎಂದು ಕೊಳ್ಳುತ್ತಾ "ಪೆಂಗೆ ಛತ್ರೈ ಬಂದ ಮೇಲೆ ಕೊಡ್ತೀನಿ" ಎಂದ.

"ನಾನು ಹೇಗೆ ನಂಬಲಿ?" ಕೇಳಿದಳು LHW.

"ನನ್ನ ನಂಬಿ ಕೆಟ್ಟವರಿಲ್ಲ. ನನ್ಹೆಂಡ್ತೀನ ಕೇಳಿ ಮೊದಲನೇ ಮಗುವಾಗಿ ಎರಡು ವರ್ಷವಾದ ಮೇಲೆ ಮದುವೆಯಾದೆ. ಕೈ ಬಿಡಲಿಲ್ಲ" ವೆಂಕ ನುಡಿದ.

"ಅವಳನ್ನು ಕೈ ಬಿಟ್ಟೆಯೋ ಇಲ್ಲವೋ ನನಗೆ ಬೇಡ. ಈಗ ಹತ್ತುರೂಪಾಯಿ ನಿನ್ನ ಕೈ ಬಿಡದಿದ್ದರೆ ನಾನಂತೂ ಈ ಕೇಸು ಕೈ ಬಿಡುವುದು ನಿಜ. ನಾಳೆ ಬರ್ತೀನಿ ಹತ್ತು ರೂಪಾಯಿ ಕೊಟ್ಟು ಸರ್ಟಿಫಿಕೇಟ್ ತಗೋ" ಎಂದು ಲೇಡಿ ವ್ಯಾನಿಶ್ ಆದಳು.

ಸರಿ, ಜಿನಸಿ ಸಾಲಕೊಡುತ್ತಿದ್ದ ಅಂಗಡಿಯವನಿಗೆ ದಮ್ಮಯ್ಯ ಹಾಕಿ ಹತ್ತು ರೂ ಸಾಲ ಮಾಡಿ ಸರ್ಟಿಫಿಕೇಟ್ ಗಿಟ್ಟಿಸಿಕೊಂಡ. ಇನ್ನೂ, ಗ್ರಾಮಸೇವಕನಿಂದ ಧೃಡೀಕರಣ ಪತ್ರವಾಗಬೇಕು. ಗ್ರಾಮಸೇವಕರ ಕಛೇರಿಯ ಬಳಿ ಹೊರಟ. ಹೋದಕೂಡಲೇ ಸಿಕ್ಕಿ ಕೆಲಸ ಮಾಡಿಕೊಡುವ ಗ್ರಾಮ ಸೇವಕನನ್ನು ಡ್ರಾಮದಲ್ಲಿ ಮಾತ್ರ ನೋಡಬಹುದೇನೋ. ಗ್ರಾಮ ಸೇವಕನೆಂದರೆ ಗ್ರಾ(ಮದ) ಮ(ಹನೀಯರ) ಸೇವಕ. ಅವರ ಸೇವೆಯ ನಂತರವೂ ಪುರುಸೊತ್ತಾದರೆ ಬೇರೆಯಾದರ ಕೆಲಸ ತೆಗೆದು ಕೊಳ್ಳುತ್ತಾನೆ. ಹಾಗೆ ತೆಗೆದುಕೊಂಡ ಕೆಲಸಕ್ಕೆ ಏನಾದರೂ ತೆಗೆದುಕೊಳ್ಳದಿದ್ದರೆ. ಅವನನ್ನು ಕೆಲಸಕ್ಕೆ ತೆಗೆದುಕೊಂಡದ್ದಕ್ಕೆ ಏನುಸಾರ್ಥಕ? ಅಂತೂ ಗ್ರಾಮಸೇವಕನ ಬಳಿ ಸಂಗ್ರಾಮ ಮಾಡಿ, ಮತ್ತೆ ಜಿನಸಿ ಅಂಗಡಿಯವನಿಗೆ ದಮ್ಮಯ್ಯ ಹಾಕಿ, ಹದಿನೈದು ರೂಪಾಯಿ ತೆತ್ತು ಧೃಡೀಕರಣ ಪತ್ರ ತೆಗೆದುಕೊಳ್ಳುವ ಹೊತ್ತಿಗೆ, ವೆಂಕನ ಹೆಂಡತಿಗೆ ಎಂಟು ತಿಂಗಳು ತುಂಬಿತ್ತು. ಅರ್ಜಿಯ ಜೊತೆಗೆ ಈ ದಾಖಲಾತಿ ಗಳನ್ನು ತನ್ನ ಗರ್ಭಿಣಿ ಹೆಂಡತಿಯನ್ನು ಕರೆದುಕೊಂಡು. ಎಲ್ಲೆಮ್ಮೋ ಎದುರಿಗೆ ಹೋದ. ಎಲ್ಲೊಮ್ಮೋ ಇವನ ಹೆಂಡತಿಯುನ್ನು ತಪಾಸಣೆ ಮಾಡಿ, ಅರ್ಜಿಗೆ ಶರಾ ಬರೆದು, ಸಂಬಂಧ ಪಟ್ಟ ಕ್ಲರ್ಕ್‌ಗೆ ಕೊಡು ಎಂದು ವೆಂಕನಿಗೆ ಹೇಳಿದರು. ಕ್ಲರ್ಕಿಗೂ ಎಲ್ಲೆಮ್ಮೋಗೂ ಸಂಬಂಧವಿದೆಯೇ ಎಂದು ಆಶ್ಚರ್ಯಪಡುತ್ತಾ, ವೆಂಕ ಕ್ಲರ್ಕಿನ

ಬಳಿ ಹೋಗಿ ದಾಖಲಾತಿಗಳನ್ನಿಟ್ಟು ನಮಸ್ಕರಿಸಿ ನಿಂತ. ಅರ್ಜಿನೋಡಿ ಕ್ಲರ್ಕ್ ಸಿಂಡರಿಸಿದ.

"ಅಲಾಟ್‌ಮೆಂಟ್ ಎಲ್ಲಾ ಮುಗಿದ ಮೇಲೆ ಬಂದೆಯಲ್ಲೋ ಎರಡು ತಿಂಗಳು ಮುಂಚೆ ಬರಬಾರ್ದಿತ್ತಾ?" ಎಂದ.

"ಎರಡು ತಿಂಗಳ ಹಿಂದೆ ನನ್ನ ಹೆಂಡ್ತಿಗೆ ಆರೇ ತಿಂಗಳಾಗಿತ್ತು ಸ್ವಾಮಿ" ವೆಂಕ ನುಡಿದ.

"ನಿನ್ನ ಅರ್ಜಿ ಇಲ್ಲಿರಲಿ ಬಂದು ವಿಚಾರಿಸ್ಕೊಂಡು ಹೋಗ್ತಿರು ಅಲಾಟ್ ಮೆಂಟ್ ಬಂದಾಗ ಕೊಡ್ತೀವಿ" ಎಂದ ಕ್ಲರ್ಕ್.

ಮಗು ಭೂಮಿಗೆ ಬಂದು ಗಲಾಟೆ ಮಾಡಿದ್ರೂ ಇವರ ಹಣ ಅಲಾಟ್ ಆಗದಿದ್ರೆ, ಎಂಬ ಸಂಶಯದೊಂದಿಗೆ ವೆಂಕ ಹಿಂದಿರುಗಿದ. ಹಲವು ದಿನ ಮನೆಗೂ ಆಫೀಸಿಗೂ ದಾರಿ ಸವೆಸಿದ. ಚಪ್ಪಲಿ ಇದ್ರೆ ತಾನೇ ಸವೆಸುವುದು.

ಒಂದು ದಿನ ವೆಂಕ ಕ್ಲರ್ಕ್‌ನ್ನು ಕೇಳಿದ. "ಸ್ವಾಮೀ, ಮೂರನೇ ಮಗು ವಾಗುವಾಗ ಹೆರಿಗೆ ಭತ್ಯೆ ಕೊಡುವುದಿಲ್ಲ, ಅಲ್ಲವೇ?"

"ಹೌದು ಯಾಕೆ?" ಕ್ಲರ್ಕ್ ಕೇಳಿದ.

"ಇನ್ನೇನಿಲ್ಲ. ಹಾಗೇನಾದ್ರೂ ಕೊಡುವುದಿದ್ದರೆ ನಿಮ್ಮ ಅಲಾಟ್‌ಮೆಂಟ್ ಸಮಯಕ್ಕೆ ಸರಿಯಾಗಿ ಎಂಟು ತಿಂಗಳಾಗುವ ಹಾಗೆ ನಾವು ಅಡ್ಜಸ್ಟ್‌ಮೆಂಟ್ ಮಾಡಿ ಕೊಳ್ಳಬಹುದಲ್ಲಾ, ಅಂತ ಅಷ್ಟೇ" ಎಂದ ವೆಂಕ. ಕ್ಲರ್ಕ್ ಮಾತಾಡಲಿಲ್ಲ. ಮತ್ತೊಂದು ವಾರ ಕಳೆಯಿತು. ಕಛೇರಿಯಲ್ಲಿನ ಯಾರೋ ಒಬ್ಬರು ಇವನನ್ನು ನೋಡಿ ಕನಿಕರದಿಂದ ವಿಚಾರಿಸಿದರು. ವಿಷಯ ತಿಳಿದು, "ಒಂದೈವತ್ತು ರೂಪಾಯಿ ಆ ಕ್ಲರ್ಕಿಗೆ ಹಾಕು. ಎಲ್ಲಾ ಮಂಜೂರಾಗುತ್ತದೆ" ಎಂದರು. ಐವತ್ತು ರೂಪಾಯಿಗೆ ಎಲ್ಲಿಗೆ ಹೋಗೋದು, ಗಂಡಾ ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗೋದು ಬಿಟ್ಟು ಒಂದು ತಿಂಗಳ ಮೇಲಾಗಿತ್ತು. ದಿನಸಿ ಅಂಗಡಿಯವನು ಲೆಕ್ಕಾ ಚುಕ್ತಾ ಮಾಡ ದಿದ್ದರೆ ಇನ್ನುಮುಂದೆ ಒಂದು ಕಾಳೂ ಕೊಡುವುದಿಲ್ಲ ಎಂದು ಬೆದರಿಕೆ ಹಾಕಿದ್ದ. ಕ್ಲರ್ಕ್, ಹೊರಗೆ ಕಾಫಿ ಕುಡಿಯುವುದಕ್ಕೆ ಹೋಗುವುದನ್ನು ಕಾದಿದ್ದ ವೆಂಕ, ಆತ ಹೊರಗೆ ಬಂದಾಗ ಅವನ ಬಳಿ ಹೋಗಿ, 'ನೀವೇ ಐವತ್ತು ಮುರ್ಕೊಂಡು ಕೊಟ್ಬಿಡಿ ಸ್ವಾಮಿ" ಎಂದ. ಕ್ಲರ್ಕ್‌ಗೂ ಇವನ ಮೇಲೆ ದಯೆ ಮೂಡಿತು. ಅಗತ್ಯವಾದ ಫಾರಂಗೆ ಇವನ ಸಹಿ ಹಾಕಿಸಿಕೊಂಡು, ಮಾರನೇ ದಿನ ಬರಲು ಹೇಳಿದ. ಮಾರನೇ ದಿನ ಬಂದು 250 ರೂಪಾಯಿ ಪಡೆದ ವೆಂಕ ಜಿನಸಿ ಅಂಗಡಿಗೆ ಹೋಗಿ ಲೆಕ್ಕ ತೆಗೆಸಿದ. ಒಟ್ಟು ಜಿನಸಿ, ನಗದು ಸೇರಿ 260 ರೂಪಾಯಿ ಆಗಿದೆ ಎಂದ ಅಂಗಡಿ ಯವ. 250 ರೂಗಳನ್ನು ಅವನ ಕೈಗೆ ಹಾಕಿ ಮನೆಗೆ ಬರಿಗೈಯಲ್ಲಿ ಬಂದಾಗ ಒಳಗಡೆ ಹೊಸ ಕೂಸಿನ ದನಿ ಕೇಳುತ್ತಿತ್ತು. ○

ಗಣೇಶನ ಹಬ್ಬ

—ಸೂರಿ

ಎಂಟು ಘಂಟೇ ಆದ್ರೂ ಹಾಸಿಗೆ ಮೇಲೆ ಆಕಳಿಸ್ತಾನೆ ಕೂತ್ಕೊಂಡಿದ್ದ ಶ್ರೀಪತಿಗೆ ಕಾಫೀ ತಂದು ಕೊಡ್ತಾ ಮುಖ ಸಿಂಡರಿಸಿಕೊಂಡು ಹೇಳಿದ್ಳು ಅವನ ಹೆಂಡ್ತಿ ರಮಾ—

"ಅದೇನು ಹಾಳು ಸೋಮಾರಿತನದಲ್ಲಿ ನಿಮ್ಮನ್ನ ಬೆಳಸಿದಾರೋ ನಿಮ್ಮಮ್ಮ, ನಾ ಬೇರೆ ಕಾಣೆ. ಅಲ್ಲ, ವರ್ಷಕ್ಕೊಂದು ಸಲ ಬರೋ ಗಣೇಶನ ಹಬ್ಬ, ಇವತ್ತಿನ ದಿನವಾದ್ರೂ–ಹೋಗ್ಲಿ ಸ್ನಾನ ಬೇಡ, ಒಂದು ಕೊಂಚ ಹಲ್ಲು ತಿಕ್ಕಿಕೊಂಡಾದ್ರೂ ಕಾಫೀ ಕುಡೀ ಬಾರ್ದ ?"

"ಸರಿ, ಶುರೂ ಆಯ್ತು ನಿನ್ನ ಸುಪ್ರಭಾತದ ಕಾರ್ಯಕ್ರಮ. ಸಾಲದ್ದಕ್ಕೆ ಹಬ್ಬದ ಸ್ಪೆಷಲ್ ಅಂತ ನಮ್ಮ ಅಮ್ಮನ್ನ ಕೂಡ ಕರೀತಾ ಇದ್ದೀಯ......ಇಂಥಾ ಹೆಂಗಸ್ರನ್ನ ನೋಡಿ ಹೆದರ್ಕೊಂಡೇ ಅಂತ ಕಾಣತ್ತೆ ಆ ಗಣಪತಿ ಮದುವೇನೆ ಬೇಡ ಅಂತ ತೆಪ್ಪಗೆ ಇದ್ದು ಬಿಟ್ಟೇರೋದು"

"ಎಲ್ಲಾ ಗಂಡಸ್ರೂ ನಿಮ್ಮ ಥರಾನೇ ಇದ್ದಿದ್ದೇ ಆಗಿದ್ರೆ ಇಂಡ್ಯಾ ದೇಶದಲ್ಲಿ ಅರ್ಧ ಜನ ಹೆಂಗಸ್ರು Spinster ಗಳೇ ಆಗಿ ಉಳಕೋತಾ ಇದ್ದಿರೋರು- ಕೆಲವರು ನನ್ನಂಥಾ ಖೋಟಾ ನಸೀಬಿನವರನ್ನ ಬಿಟ್ರೆ"

ಈ ರೀತಿ warm up ಆದ ಮೇಲೆ ಮಾಮೂಲು ಅಂದ್ರೆ ಒಂದು ಅರ್ಧ ಘಂಟೇನಾದ್ರೂ ನಡೀಬೇಕಾಗಿದ್ದ ಈ ಗಂಡ ಹೆಂಡಿರ ಜಗಳ ಇವತ್ತು ಪಕ್ಕದ ಮನೆ ಶಂಕರಪ್ಪನ ಮಗಳು ಶಾಂತಿ ಬಂದ್ಲೂ ಅನ್ನೋ ಕಾರಣದಿಂದಾಗಿ ಎರಡೇ ನಿಮಿಷಕ್ಕೆ cease-fire ಆಯಿತು.

"ಆಂಟೀ, ನಮ್ಮಮ್ಮ ಅಂತಾರೆ, ಮತ್ತೆ ನಿಮ್ಮನೆ ಈಳಿಗೆ ಮಣೆ ಸ್ವಲ್ಪ ಕೊಟ್ಟಿರಬೇಕಂತೆ, ಒಂಭತ್ತು, ಒಂಭತ್ತೂ ಕಾಲು ಹೊತ್ತಿಗೆಲ್ಲ ವಾಪಸ್ ಕೊಡ್ತಾ ರಂತೆ.

"ಅಯ್ಯೋ, ಕೊಡೋಣವಂತೆ. ಆದ್ರೆ ನಿಮ್ಮನೇದು ಏನಾಯ್ತು ? ಅಂಥಾ ವೈನವಾಗಿತ್ತು.

"ಅದೂ ಇದೆ ಆಂಟೀ. ಆದ್ರೆ ನಂ ಡ್ಯಾಡಿ ಇವತ್ತಿಂದ ಶುರೂ ಮಾಡ್ಕೊಂಡು ಇನ್ಮೇಲೆ ಯಾವತ್ತು ರಜಾ ಬಂದ್ರೂ ಸರಿ, ನಮ್ಮಮ್ಮಂಗೆ ಅಡಿಗೇ ಮನೇಲಿ help ಮಾಡ್ಕೊಡೋದು ಅಂತ ನಿರ್ಧಾರ ಮಾಡಿದ್ದಾರೆ. ಹಸೀ ಬೇಳೆಗೆ, ಪಲ್ಯಕ್ಕೆ ತರಕಾರಿ ನಮ್ಮಮ್ಮ ಹೆಚ್ತಾರೆ. ಚಿಪ್ಸ್‌ಗೆ ಆಲೂಗಡ್ಡೆ, ಹೆಚ್ಚಿಕೊಡೋದು, ಒಬ್ಬಟ್ಟಿಗೆ ಕಾಯಿ ತುರಿದು ಕೊಡೋದು ನಂ ಡ್ಯಾಡೀ ಮಾಡಿಕೊಡ್ತಾರೆ. ಆ ಮೇಲೆ ಆಂಬೋಡೆಗೆ ಬೇಳೆ ರುಬ್ಬಿಕೊಡೋದೂ ಡ್ಯಾಡೀನೇ

ಈಳಿಗೆ ಮಣೆ ಇಸಕೊಂಡು ಅವಳು ಹೊರಗೆ ಹೋದ ಮೇಲೆ ಮತ್ತೆ ಶುರೂ ಗಂಡ ಹೆಂಡತಿಯರ ನಡುವೆ ಚಕಮಕಿ.

"ಕಲ್ತು ಕೊಳ್ರೀ, ಶಂಕರಪ್ಪನವರನ್ನ ನೋಡಿ. ಹೆಂಡತೀಗೆ ತ್ರಾಸವಾಗುತ್ತಲ್ಲ ಅಂತ ಪಾಪ ಅಡಿಗೇ ಮನೆ ಕೆಲಸಕ್ಕೇ ಧುಮುಕತಾ ಇದಾರೆ–ನೀವೂ ಇದೀರಾ. —ಅಡಿಗೆ ಮಾಡೋದು ಹಾಳಾಗ್ಹೋಗ್ಲಿ, ಮಾಡಿಟ್ಟ ಕಾಫೀನ ತಗೊಂಡು ಹೋಗೋಕ್ಕೆ ಅಡಿಗೇ ಮನೇಗೆ ಬರೋಕ್ಕೆ ಕೂಡ ಸೋಂಭೇರಿತನ........ಹುಂ ಹೇಳ್ಕೊಂಡು ಏನು ಉಪಯೋಗ ? ಎಲ್ಲಾ ನನ್ನ ಖರ್ಮ ಅಂತ ಅನ್ಕೋ ಬೇಕು, ಸುಮ್ನೆ ಇರಬೇಕು.

"ಸರಿ, ಆ ಷಂಡ ಶಂಕರಪ್ಪ ಚಿಪ್ಸ್‌ಗೆ ಆಲೂಗಡ್ಡೆ ಹೆಚ್ದ, ಅದನ್ನು ಅವ್ನ ಹೆಂಡ್ತೀ ಮಕ್ಳು ತಿಂದ್ರು !.........ಎಲ್ಲೋ ಅವ್ನ ಹೆಂಡ್ತೀನೂ ನಿನ್ ಧರಾನೇ ಅವನ್ನೂ ತರಾಟೆಗೆ ತಗೊಂಡಿರಬೇಕು. ಅದಕ್ಕೇ ಅವು , ಬೀಸೋ ದೊಣ್ಣೆ ತಪ್ಪಿದ್ರೆ...ಅಂತ ನಮ್ಮನೇಯಿಂದ ಈಳಿಗೆ ಮಣೆ, ಆಚೇ ಮನೆಯಿಂದ ಚಕ್ಲಿ ಪರಳು ಅಂತೆಲ್ಲಾ ಸ್ಟಂಟ್ ಶುರೂ ಮಾಡ್ಕೊಂಡಿದಾನೆ. ನೋಡ್ತಾ ಇರೂ, ಅವ್ನ ಇನ್ನೊಂದು ಐದ್ ನಿಮಿಷದಲ್ಲಿ ಈಳಿಗೆ ಮಣೇ, ರುಬ್ಬುಗುಂಡೂ ಅಂತ ಅವೇ ನಿದ್ಕೋ ಅವನ್ನೆಲ್ಲಾ ಎತ್ತಿ ಆ ಕಡೆ ಬಡಿದು, ಹಾಸಿಗೆ ಮೇಲೆ ಉರಳ್ಕೊಳ್ದಿದ್ರೆ ನನ್ ಹೆಸರು ಶ್ರೀಪತೀನೆ ಅಲ್ಲ."

"ಹ್ಹಾ, ಹ್ಹಾ ನೋಡೇ ಬಿಡೋಣಂತೆ ...

ಇಷ್ಟೆಲ್ಲಾ ಧಾಳಿ, ಪ್ರತಿಧಾಳಿ ಅಂತ ಆದ್ಮೇಲೆ ಈ ಕದನದಲ್ಲಿನ ಎರಡೂ

ಪಕ್ಷಗಳೂ ತಮ್ಮ ತಮ್ಮ ಸ್ಥಾನಗಳಿಗೆ ವಾಪಸು—ಅವಳು ಅಡಿಗೆ ಮನೇಗೆ, ಇವನು ಯೊದ್ದಿಕೆ ಕೆಳಗೆ.

ಒಂದು ಎರಡು ನಿಮಿಷಾ ಆಗೋಕ್ಕಿಲ್ಲ ಮತ್ತೆ ಪದ್ಮಾ ಓಡಿ ಬಂದ್ಳು, ಶಾಂತಿ.

"ಆಂಟೀ, ಆಂಟೀ ಒಂದು ಕೊಂಚ ice cube ಅರ್ಜೆಂಟಾಗಿ ಬೇಕಂತೆ ನಂ ಡ್ಯಾಡೀಗೆ.

ರಮಾಗೆ ಆಶ್ಚರ್ಯ "ಏನೇ, ಇಷ್ಟು ಬೇಗ ನಿಮ್ಮ ಡ್ಯಾಡೀದು ಈಳಿಗೆ ಮಣೆ, ರುಬ್ಬುಗುಂಡು ಕೆಲ್ಸಾ ಎಲ್ಲಾ ಆಗಿ ಹೋಯ್ತಾ? ಅದರ್ಲಿ, ಈ ice-cube ಹಾಕಿ ಏನ್ ಮಾಡ್ತಾರಂತೆ ?"

ಶ್ರೀಪತೀಗೆ ಯಾಕೋ ಮೈಯೆಲ್ಲಾ ಉರಿಯೋ ಹಾಗಾಯಿತು, ಈ ಶಂಕರಪ್ಪನ ವ್ಯಾಪಾರಾ ನೋಡಿ. ಇವನಂಥಾವ್ರು ಇನ್ನು ನಾಕು ಜನ ಹುಟ್ಕೊಂಡ್ರೆ ಸಾಕು,—ಆ ಮೇಲೆ ಯಾವ ಗಂಡನೂ ಕೂಡ ಅಷ್ಟೆ, ರಜಾ ದಿನಾ ಅಂದ್ರೂ ಒಂದ್ ಅರ್ಧ ಗಂಟೆ ಲೇಟಾಗಿ ಏಳೋ ಹಾಗಿಲ್ಲ.

ಒಂದ್ ಥರಾ ವ್ಯಂಗ್ಯದಲ್ಲೇ ಹೇಳಿದ–"ಹೌದೌದು, ಒಂದು ಎರಡು ಕಿಲೋ ಆಲೂಗಡ್ಡೇನ ಉಪ್ಪೇರೀಗೆ ಅಂತ ಹೆಚ್ಚಿ, ಒಂದು ನಾಕು ತೆಂಗಿನಕಾಯಿನ ತುರಿದು ಆ ಕಡೆ ಇಟ್ಟು ಬಿಟ್ಟು, ಈಗ iceಗೆ ಹೇಳಿ ಕಳಿಸಿದ್ದಾನೆ–ಬಹುಶಃ ಹುಣಿಸೇ ಹಣ್ಣು, ನಿಂಬೇ ಹಣ್ಣು ಅಂತೆಲ್ಲಾ ಹಾಕಿ fruit salid ಮಾಡಿ, ಮನ್ಶ್ಯೋರ್ಗೆಲ್ಲಾ ತಿನ್ನಿಸ್ತಾನೆ ಅಂತ ಕಾಣತ್ತೆ.

"ಇಲ್ಲಾ ಅಂಕಲ್, ಚಿಪ್ಸ್‌ಗೆ ಅಂತ ಆಲೂಗಡ್ಡೆ ಹೆಚ್ಕೋವಾಗ ಬೆರಳಂ ಕೊಯ್ಕೊಂಡ್ ಬಿಟ್ರು. ರಕ್ತಾ ನಿಲ್ಸೋಕೆ ice ಬಟ್ಟೆ ಕಟ್ಕೋತಾರಂತೆ."

ಅವ್ಳು ice-tray ನ ತಗೊಂಡು ಆ ಕಡೇ ಹೋದ್ಮೇಲೆ ಒಂದ್ ಥರಾ ಲವಲವಿಕೆಯಿಂದ ಎದ್ದು ಕೂತ ಶ್ರೀಪತಿ–

"ಟಠ್ಮಥಾ !....ನೋಡಿದ್ರಾ ಮೇಡಂ ನಂ ದೇವ್ರು ಸತ್ಯಾನ ? ಈ ಶ್ರೀಪತೀ ಮಾತೂ ಅಂದ್ರೇ ಸುಮ್ನೇ ಅನ್ಕೊಂಡ್ರಾ ?"

"ಛೆ, ಎಂಥಾ ಕಟುಕ್ರೂ ರೀ ನೀವು, ಅಲ್ಲ, ಅತ ರಕ್ತಾ ಸುರಸ್ಕೊಂಡು ಒದ್ದಾಡ್ತಾ ಇದ್ರೆ. ನಿಂಗೆ ತಮಾಷೇ ಅಂತ ಅನ್ನಿಸತ್ತೇನ್ರಿ ?"

"ಅವ್ನ್ ಬೇಕೂಫ್ ತನಕ್ಕಿಷ್ಟು–ಅಲ್ವೇ ಕಟ್ಕೊಂಡ್ ಹೆಂಡ್ತೀ ಕೈಲಿ ಭೇಷ್ ಅಂತ್ ಅನಿಸ್ಕೊಂಡಿರೋ ಗುಂಡ್ನು ಇತಿಹಾಸದಲ್ಲೇ ಇಲ್ಲ...ಅಂತದ್ರಲ್ಲಿ ಈ ಗೂಬೇ ಹೆಂಡ್ತೀಗೆ ಮಸ್ಕಾ ಹೊಡೀತೀನಿ ಅಂತ ಅಭ್ಯಾಸ್‌ವಿಲ್ಲದಿದ್ರೂ, ಈಳಿಗೆ ಮಣೇ ಹಿಡಕೊಂಡು first attempt ನಲ್ಲೇ ಉಪ್ಪೇರೀಗೆ ಅಂತ ಆಲೂಗಡ್ಡೆ ಹೆಚ್ಕೋಕೆ ಹೋದ್ರೆ, ಇನ್ನೇನ್ ತಾನೆ ಆಗೋಕ್ ಸಾಧ್ಯ ?...ಅಲ್ವೇ, ಅಷ್ಟಿಲ್ದೇ ಹೇಳ್ತಾ ಇದ್ನೇ ಆ ಕೃಷ್ಣ ಪರಮಾತ್ಮಾ—ನಿನ್ ಸ್ವಭಾವಕ್ಕೆ ಅನುಗುಣವಾದ ಕೆಲ್ಸಾ ಮಾತ್ರ ಮಾಡೂ, ಬೇರೆಯವ್ರ ಕೆಲ್ಸಾ ಎಷ್ಟೇ ಮುಖ್ಯಾ ಅಂತ ಅನಿಸಿದ್ರೂ, ಅದಕ್ಕೆ ಕೈ ಹಾಕ್ಬೇಡ—ಅಂತ ?"

"ಓ, ಹೋ, ಹೋ, The devil quoting the scriptures ಅಂತಾ ರಲ್ಲ, ಹಾಗಾಯ್ತು—ಅದ್ಸರಿ, ನಿಮ್ಮ ಸ್ವಭಾವಕ್ಕೂ ಅನುಗುಣವಾದ ಕೆಲ್ಸಾನೂ ಒಂದಿದೇ ಅನ್ನೋದಾದ್ರೆ, ಅದು ಯಾವುದೋ, ನಾವೂ ನೋಡ್‌ಬಹುದೇ ?"

"ಅದೇ ? ನೋಡು...ಇದು"

—ಅಂದೋನೆ ಮುಸುಕು ಹಾಕ್ಕೊಂಡು ಮತ್ತೆ ಬಿದ್ಕೊಂಡ, ಶ್ರೀಪತಿ.

ನನ್ನ ಅರ್ಧಾಂಗಿ ಹೊಲಿಗೆ ಮೇಡಮ್ಮ

ಓ! ನನ್ನ ಅರ್ಧಾಂಗಿ ನೀ ಇತ್ತ ಕೇಳು ।
ನೀ ಹೊಲಿದ ಅಂಗಿಯಲಿ ಸರಿಯಿಲ್ಲ ತೋಳು ॥
ಕಾಲರ್ರು ಕಾಜಗಳು, ಒರೆಯಾಗಿದೆ ಏಕೆ? ।
ಜೇಬು ನಿನ್ನದೇ ತಾನೇ? ಬೆನ್ನ ಮೇಲೇಕೆ? ॥

—ಪಾಲೇಶಿ, ಬೇತೂರು.

ಒಡೆಯುನ ಕನಸು

—ಕಪಟಕವಿ

ಕಟ್ಟು ತಾನೆ ಕಟ್ಟು ತಾನೆ
ನನ್ನ ಮನೆಯ ಕಟ್ಟು ತಾನೆ
ನನ್ನ ಮೇಸ್ತ್ರಿಯು
ತಂದಿದಾನೆ, ತಂದಿದಾನೆ
ಎಲ್ಲ ಸರಕು ತಂದಿದಾನೆ
ನನ್ನ ಮೇಸ್ತ್ರಿಯು ! ೧


ಶಾಂತ ನಗೆಯ ಮೊಗದ ಮೂರ್ತಿ
ಸಹನೆಯವನ ಸಹಜ ರೀತಿ
ನನ್ನ ಮೇಸ್ತ್ರಿಯು
ತಂದಿದಾನೆ ತಂದಿದಾನೆ
ಉಕ್ಕು ಗಾರೆ ತಂದಿದಾನೆ
ನನ್ನ ದೇವನು ೨

ನಗರ ಸಭೆಯ ಕ್ಲಿಷ್ಟರೀತಿ
ಮಾಮೂಲಿನ ಬೃಹದಾಕೃತಿ
ಬಲ್ಲ ಮೇಸ್ತ್ರಿಯು
ಪರ್ಮಿಟ್ ಎಲ್ಲ ಇಟ್ಟಿದಾನೆ
ನನ್ನ ಸದ್ಗುರು ೩

ತಳಪಾಯದ ಶಿಲೆಯ ಮೇಲೆ
ಇಳಿದು, ಅಳೆದು ನಿಂತಿದಾನೆ
ವಿಶ್ವ ಕರ್ಮನು !
ನನ್ನ ಬಾಳ ಭವ್ಯ ಸೌಧ
ಕಟ್ಟಲೆಂದು ಬಂದಿದಾನೆ
ನನ್ನ ಮೇಸ್ತ್ರಿಯು ! ೪

(ಕುವೆಂಪು ಅವರ ಕ್ಷಮೆ ಕೋರಿ)

ಶುಭಾಶಯಗಳೊಂದಿಗೆ



ಎಸ್. ವಿ. ಆರ್. ಏಜನ್ಸೀಸ್

ಬೆಂಗಳೂರು

ಶುಭಾಶಯಗಳೊಂದಿಗೆ

ಶೃಂಗಾರ್ ಇಲೆಕ್ಟ್ರಿಕಲ್ಸ್

ಇಲೆಕ್ಟ್ರಿಕಲ್ ಇಂಜಿನೀಯರ್ಸ್ ಹಾಗೂ ಪ್ರಥಮ ದರ್ಜೆಯ ಕಂಟ್ರಾಕ್ಟರ್ಸ್

ತುಮಕೂರು ರಸ್ತೆ, ಪೀಣ್ಯ


ಬೆಂಗಳೂರು–560 058

ದೂರವಾಣಿ 384549
350984

ಶುಭಾಶಯಗಳೊಂದಿಗೆ

ಟೆಕ್ನೋಲಿಂಕ್ ಎಂಟರ್‌ಪ್ರೈಸಸ್


ನಂ. 35, 5ನೇ ಕ್ರಾಸ್ 1ನೇ ಮೇನ್ ಎಸ್. ಕೆ. ಗಾರ್ಡನ್
ಬೆನ್‌ಸನ್ ಟೌನ್, ಬೆಂಗಳೂರು-560 046



ಶುಭಾಶಯಗಳೊಂದಿಗೆ

ಎಕ್ಸಲ್ ಟೂಲ್ಸ್ ಎಂಡ್ ಇಂಜಿನೀರಿಂಗ್ ಎಂಟರ್‌ಪ್ರೈಸಸ್

ಬಿ-20, 1ನೇ ಕ್ರಾಸ್, 1ನೇ ಸ್ಟೇಜ್. ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್
ಬೆಂಗಳೂರು–560 058.



ಶುಭಾಶಯಗಳೊಂದಿಗೆ :—

